ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೦೨**

**ಒಟ್ಟು ಪ್ರಶ್ನೆಗಳು – ೯೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೇಳನೇ ಅಧಿವೇಶನ**

**ಬುಧವಾರ, ದಿನಾಂಕ : ೦೪ನೇ ಫೆಬ್ರವರಿ, ೨೦೧೫**

---

## ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

## ಸೌಭಾಗ್ಯ ಸಂಜೀವಿನಿ ಮಳೆ ನೀರು ತಡೆ ಯೋಜನೆಯನ್ನು ಕೈಗೆತ್ತಿಕೊಳ್ಳುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೩ (೪೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ತಜ್ಞ ಎ.ಜಿ. ಕೋಡ್ಲಿಯವರ ಮಹತ್ವಾಕಾಂಕ್ಷೆಯ, ಕರಾವಳಿ ಜಿಲ್ಲೆಗಳ ನದಿ ಜೋಡಣೆ ಯೋಜನೆಯಾದ ಸೌಭಾಗ್ಯ ಸಂಜೀವಿನಿ ಮಳೆ ನೀರು ತಡೆ ಯೋಜನೆಯ ಸರ್ವೆಗಾಗಿ ಹಿಂದಿನ ಸರ್ಕಾರ ಬಜೆಟ್‌ನಲ್ಲಿ ತೆಗೆದಿರಿಸಿದ ೫ ಕೋಟಿ ಹಣ ವಿನಿಯೋಗವಾಗದೇ ಉಳಿದಿರುವುದು ನಿಜವೇ ;

(ಆ) ಕರಾವಳಿ ಜಿಲ್ಲೆಯಲ್ಲಿ ಬೀಳುವ ಮಳೆ ನೀರು ಸಮುದ್ರ ಸೇರಿ ವ್ಯರ್ಥವಾಗುವ ನೀರು ಸಂಗ್ರಹಣೆಗಾಗಿ, ನದಿ ಜೋಡಣೆ ಯೋಜನೆಯ ಅನುಷ್ಠಾನಕ್ಕೆ ಪ್ರಸ್ತುತ ಸರ್ಕಾರದ ನಿಲುವೇನು ;

(ಇ) ಮಳೆ ನೀರು ಸಂಗ್ರಹಕ್ಕಾಗಿ ಸೌಭಾಗ್ಯ ಸಂಜೀವಿನಿ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿದೆ ?



## ಕಸ್ತೂರಿ ರಂಗನ್ ವರದಿಯ ಗೊಂದಲದ ವಿವರಣೆ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೪ (೪೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಸ್ತೂರಿ ರಂಗನ್ ವರದಿ ಅನ್ವಯ ರಾಜ್ಯದ ಯಾವ ಯಾವ ಗ್ರಾಮಗಳು ವರದಿಯ ವ್ಯಾಪ್ತಿಯೊಳಗೆ ಬರುತ್ತವೆ ; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ವರದಿಯ ಸಾಧಕ ಬಾಧಕಗಳ ಚರ್ಚೆಯ ನಂತರ ಯಾವ ಯಾವ ಗ್ರಾಮಗಳನ್ನು ಬಿಡಬೇಕೆಂಬ ಮಾಹಿತಿಗಾಗಿ ಜಿಲ್ಲಾಧಿಕಾರಿಗಳು ಗ್ರಾಮ ಮಟ್ಟದ ಸಭೆಗಳನ್ನು ನಡೆಸಿಲ್ಲವೆಂಬ ದೂರು ಬಂದಿರುವುದು ನಿಜವೇ ;

(ಇ) ಸದರಿ ವರದಿಯಗೊಂದಲ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು ? (ಪೂರ್ಣ ವಿವರ ನೀಡುವುದು)

## ಬಂದರು ಕಾಮಗಾರಿಯ ವಿಳಂಬದ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೫ (೪೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಬಂದರುಗಳ ಸಂಖ್ಯೆ ಎಷ್ಟು ; ಅವುಗಳ ಹೆಸರು ಮತ್ತು ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಯೋಜನೆಗಳಾವುವು ;

(ಆ) ದಕ್ಷಿಣ ಕನ್ನಡ – ಉಡುಪಿ ಜಿಲ್ಲೆಗಳು ಸೇರಿದಂತೆ, ೨ ಮತ್ತು ೩ನೇ ಹಂತದ ಬಂದರುಗಳ ಅಭಿವೃದ್ಧಿಗೆ ಮಂಜೂರಾದ ಕಾಮಗಾರಿಗಳು ಮತ್ತು ಅನುದಾನದ ಸಂಪೂರ್ಣ ವಿವರ ನೀಡುವುದು ; ಕಾಮಗಾರಿ ವಿಳಂಬಕ್ಕೆ ಕಾರಣಗಳೇನು ; ಅವುಗಳ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ನಬಾರ್ಡ್ ಯೋಜನೆಯಡಿ, ಉಳ್ಳಾಳದ ಶಾಶ್ವತ ತಡೆಗೋಡೆಯ ಪ್ರಥಮ ಹಂತದ ಕಾಮಗಾರಿ ಆರಂಭಿಸಲಾಗಿದೆಯೇ ; ಆಗಿದ್ದರೆ ಪ್ರಗತಿಯ ವಿವರ ತಿಳಿಸುವುದು ಹಾಗೂ ಪ್ರಥಮ ಹಂತದ ಕಾಮಗಾರಿ ಯಾವಾಗ ಮುಗಿಸಲಾಗುವುದು ?

## ಮೀನು ಮಾರಾಟ ಮಾಡುವ ಮಹಿಳೆಯರಿಗೆ ಸಕಾಲದಲ್ಲಿ ಹಣ ನೀಡದಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೬ (೪೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕಾ ಇಲಾಖೆಯಲ್ಲಿ, ಮೀನು ಮಾರಾಟ ಮಾಡುವ ಮಹಿಳೆಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಉಳಿತಾಯ ಯೋಜನೆಗೆ ಸಂಬಂಧಪಟ್ಟಂತೆ ಸಕಾಲದಲ್ಲಿ ಹಣ ಪಾವತಿಯಾಗದೇ ಇರುವುದು ನಿಜವೇ ;



(ಆ) ಹಾಗಿದ್ದಲ್ಲಿ, ಸಕಾಲದಲ್ಲಿ ಹಣ ಪಾವತಿ ಮಾಡಲು ಕೈಗೊಂಡಿರುವ ಕ್ರಮಗಳಾವುವು ; (ವಿವರ ನೀಡುವುದು)

(ಇ) ಬಾಕಿ ಉಳಿದಿರುವ ಉಳಿತಾಯ ಯೋಜನೆಯ ಹಣವನ್ನು ಯಾವ ದಿನಾಂಕದೊಳಗೆ ಪಾವತಿಸಲಾಗುವುದು ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಿರ್ಮಾಣಗೊಂಡ ಕಿಂಡಿ ಅಣೆಕಟ್ಟುಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೭ (೪೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಕಿಂಡಿ ಅಣೆಕಟ್ಟುಗಳ ನಿರ್ಮಾಣಕ್ಕೆ ಮಂಜೂರಾದ ಕಾಮಗಾರಿಗಳ ಸಂಖ್ಯೆ ಎಷ್ಟು ಮತ್ತು ಯಾವುವು ; (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಮಂಜೂರಾದ ಕಿಂಡಿ ಅಣೆಕಟ್ಟು ಕಾಮಗಾರಿಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳೆಷ್ಟು, ಪ್ರಗತಿಯಲ್ಲಿರುವ ಕಾಮಗಾರಿಗಳೆಷ್ಟು, ಇನ್ನು ಪ್ರಾರಂಭಗೊಳ್ಳದ ಕಾಮಗಾರಿಗಳೆಷ್ಟು ; (ವರ್ಷವಾರು, ತಾಲ್ಲೂಕುವಾರು ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರ ಹೆಸರಿನೊಂದಿಗೆ ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಳೆದ ಸಣ್ಣ ನೀರಾವರಿ ಇಲಾಖೆಯಡಿ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ

ಬಾಕಿ ನೀಡಲು ಇರುವ ಮೊತ್ತವೆಷ್ಟು, ಬಾಕಿ ಮೊತ್ತವನ್ನು ಯಾವಾಗ ಪಾವತಿಸಲಾಗುವುದು ; ಟೆಂಡರ್ ಕರಾರಿನಂತೆ ನಿಗದಿತ ಅವಧಿಯಲ್ಲಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ನೀಡಲು ಬಾಕಿ ಇರುವ ಮೊತ್ತವನ್ನು ತಕ್ಷಣ ಪಾವತಿಸಲಾಗುವುದೇ ? (ಕಾಮಗಾರಿವಾರು, ಗುತ್ತಿದಾರರ ಹೆಸರಿನೊಂದಿಗೆ ವಿವರ ನೀಡುವುದು)

## ವರಾಹಿ ನೀರಾವರಿ ಯೋಜನೆಯ ಕಾಮಗಾರಿಯಲ್ಲಿನ ಡಿಸೈನ್ ಮತ್ತು ಡ್ರಾಯಿಂಗ್ ಬದಲಾವಣೆಯ ಕುರಿತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೮ (೪೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರಾಹಿ ನೀರಾವರಿ ಯೋಜನೆಯಡಿ ಸಿದ್ದಾಪುರದ ಹೊರಿಯಬ್ಬೆ ಎಂಬಲ್ಲಿ ವರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಡೈವರ್ಶನ್ ವಿಯರ್ ಮತ್ತು ಟನಲ್ ಕಾಮಗಾರಿಗಳ ಡಿಸೈನ್ ಮತ್ತು ಡ್ರಾಯಿಂಗ್ ಬದಲಾಯಿಸಲ್ಪಟ್ಟಂತೆ ಡಿಸೈನ್ ಮತ್ತು ಡ್ರಾಯಿಂಗ್ ಬದಲಾಯಿಸಲ್ಪಟ್ಟ ವರಾಹಿ ನೀರಾವರಿ ಯೋಜನೆಯ ಇತರ ಕಾಮಗಾರಿಗಳು ಯಾವುವು ; ಡಿಸೈನ್ ಮತ್ತು ಡ್ರಾಯಿಂಗ್ ಬದಲಾಯಿಸಲ್ಪಟ್ಟ ಕಾಮಗಾರಿಗಳನ್ನು ನಿರ್ವಹಿಸದ ಗುತ್ತಿಗೆದಾರರು ಯಾರು ;



(ಆ) ವರಾಹಿ ನೀರಾವರಿ ಯೋಜನೆಯಲ್ಲಿನ ಕಾಮಗಾರಿಗಳ ಡಿಸೈನ್ ಮತ್ತು ಡ್ರಾಯಿಂಗ್ ಬದಲಾವಣೆಯಿಂದ ಸರ್ಕಾರದ ಬೊಕ್ಕಸಕ್ಕೆ ಆದ ಹೆಚ್ಚುವರಿ ಆರ್ಥಿಕ ವೆಚ್ಚವೆಷ್ಟು ; ಈ ರೀತಿಯಾಗಿ ಕಾಮಗಾರಿಗಳು ಡಿಸೈನ್ ಮತ್ತು ಡ್ರಾಯಿಂಗ್ ಬದಲಾವಣೆ ಮಾಡಲು ಕಾರಣಗಳೇನು ?

## ರಾಜ್ಯದಲ್ಲಿ ಕಸ್ತೂರಿ ರಂಗನ್ ವರದಿಯ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಕುರಿತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೯೯ (೪೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ಗ್ರಾಮಗಳು ಕಸ್ತೂರಿರಂಗನ್ ವರದಿಯ ವ್ಯಾಪ್ತಿಗೆ ಒಳಪಡುತ್ತವೆ ;

(ಆ) ಕಸ್ತೂರಿರಂಗನ್ ವರದಿಯ ಆಧಾರದಲ್ಲಿ ಗೊಂದಲಕ್ಕೆ ಒಳಗಾಗಿರುವ ರೈತರು ಮತ್ತು ಸಾರ್ವಜನಿಕರಿಗೆ ವಿಶ್ವಾಸ ಮೂಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕಸ್ತೂರಿರಂಗನ್ ವರದಿಯನ್ವಯ ರೈತರಿಗಾಗುವ ಅನುಕೂಲ ಮತ್ತು ಅನಾನುಕೂಲತೆಗಳೇನು ?

## ವರಾಹಿ ನೀರಾವರಿ ಯೋಜನೆಯಲ್ಲಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೦೦ (೪೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರಾಹಿ ನೀರಾವರಿ ಯೋಜನೆ ಪ್ರಾರಂಭವಾದಂದಿನಿಂದ ಇಂದಿನತನಕ ವರಾಹಿ ನೀರಾವರಿ ಯೋಜನೆಯಲ್ಲಿ ಅತೀ ಹೆಚ್ಚು ಕಾಮಗಾರಿ ನಿರ್ವಹಿಸಿದ ಗರಿಷ್ಠ ಹತ್ತು ಮಂದಿ (Top Ten) ಗುತ್ತಿಗೆದಾರರು ಯಾರು ;

(ಆ) ವರಾಹಿ ನೀರಾವರಿ ಯೋಜನೆ ಪ್ರಾರಂಭವಾದಂದಿನಿಂದ ಇಂದಿನತನಕ ನಿರ್ವಹಿಸಲಾದ ಕಾಮಗಾರಿಗಳಿಗೆ ಅತೀ ಹೆಚ್ಚು ಹೆಚ್ಚುವರಿ ಆರ್ಥಿಕ ಹೊಣೆಗಾರಿಕೆ (EFI) ಪಡೆದ ಗರಿಷ್ಠ ಹತ್ತು ಮಂದಿ (Top Ten) ಗುತ್ತಿಗೆದಾರರು ಯಾರು ಮತ್ತು ಅವರು ನಿರ್ವಹಿಸಿದ ಕಾಮಗಾರಿ ಯಾವುದು ;

(ಇ) ವರಾಹಿ ನೀರಾವರಿ ಯೋಜನೆ ಪ್ರಾರಂಭವಾದಂದಿನಿಂದ ಇಂದಿನತನಕ ನಿರ್ವಹಿಸಲಾದ ಕಾಮಗಾರಿಗಳಲ್ಲಿ ಗುತ್ತಿಗೆ ಪಡೆದು ಅವಧಿಯೊಳಗೆ ಪೂರ್ಣಗೊಳಿಸದೇ ಅತೀ ಹೆಚ್ಚು ವರ್ಷಗಳ ಕಾಲ ಅದೇ ಕಾಮಗಾರಿಯನ್ನು ನಿರ್ವಹಿಸಿದ ಗರಿಷ್ಠ ಹತ್ತು ಮಂದಿ (Top Ten) ಮೊದಲ ಹತ್ತು ಗುತ್ತಿಗೆದಾರರು ಯಾರು ಮತ್ತು ಅವರು ನಿರ್ವಹಿಸಿದ ಕಾಮಗಾರಿ ಯಾವುದು ;



(ಈ) ವರಾಹಿ ನೀರಾವರಿ ಯೋಜನೆ ಪ್ರಾರಂಭವಾದಂದಿನಿಂದ ಇಂದಿನತನಕ ಟೆಂಡರ್ ಇಲ್ಲದೆ ತುಂಡುಗುತ್ತಿಗೆ ಮೂಲಕ ವರಾಹಿ ನೀರಾವರಿ ಯೋಜನಾ ಕಾಮಗಾರಿಯನ್ನು ನಿರ್ವಹಿಸಿದ ಗರಿಷ್ಠ ಹತ್ತು ಮಂದಿ (Top Ten) ಮೊದಲ ಹತ್ತು ಗುತ್ತಿಗೆದಾರರು ಯಾರು ಮತ್ತು ಅವರು ನಿರ್ವಹಿಸಿದ ಕಾಮಗಾರಿಗಳು ಯಾವುವು ?

## ಮಾಜಿ ಯೋಧರಿಗೆ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೧ (೫೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಡಿಗೆರೆ ತಾಲ್ಲೂಕು ಕಂದಾಯ ಇಲಾಖೆಗೆ ಮಾಜಿ ಯೋಧರು ಕೃಷಿ ಉದ್ದೇಶಕ್ಕಾಗಿ ಜಮೀನು ಮಂಜೂರು ಮಾಡುವಂತೆ ಕೋರಿದ ಎಷ್ಟು ಅರ್ಜಿಗಳು ಸ್ವೀಕೃತವಾಗಿದೆ ; ಆ ಪೈಕಿ ಎಷ್ಟು ಜನ ಮಾಜಿ ಯೋಧರಿಗೆ ಜಮೀನು ಮಂಜೂರು ಮಾಡಲಾಗಿದೆ ; (ವಿವರ ನೀಡುವುದು)

(ಆ) ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಎಷ್ಟು ಮಾಜಿ ಯೋಧರು ಅರ್ಜಿ ಸಲ್ಲಿಸಿರುತ್ತಾರೆ ;

(ಇ) ಈ ವರ್ಗದ ಎಷ್ಟು ಮಾಜಿ ಯೋಧರಿಗೆ ಜಮೀನು ಮಂಜೂರು ಮಾಡಲಾಗಿದೆ ? (ವಿವರ ಒದಗಿಸುವುದು)

## ಪರಿಶಿಷ್ಟ ಪಂಗಡ ಜನಾಂಗಕ್ಕೆ ಸ್ಮಶಾನಕ್ಕಾಗಿ ಭೂಮಿ ಮಂಜೂರು ಮಾಡುವ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨ (೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೂಡಿಗೆರೆ ತಾಲ್ಲೂಕು ಗೋಣಿಬೀಡು ಹೋಬಳಿ ಜನ್ನಾಪುರ ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸ್ಮಶಾನವಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಜನಾಂಗದ ಪೂರ್ವಜರ ಕಾಲದ ಸ್ಮಶಾನಕ್ಕೆ ಅನ್ಯಕೋಮಿನವರೋರ್ವರು ಬೇಲಿ ಹಾಕಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಪರಿಶಿಷ್ಟ ಪಂಗಡ ಜನಾಂಗದ ಸ್ಮಶಾನಕ್ಕೆ ಅಧಿಕೃತವಾಗಿ ಭೂಮಿ ಮಂಜೂರು ಮಾಡದಿರಲು ಕಾರಣಗಳೇನು ?

## ಯುವಕರ ಸಬಲೀಕರಣಕ್ಕಾಗಿ ಸರ್ಕಾರದ ಕಾರ್ಯಕ್ರಮಗಳು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩ (೫೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಯುವಕರ ಸಂಖ್ಯೆ ಎಷ್ಟು ; ಯಾವ ವಯಸ್ಸಿನಿಂದ, ಯಾವ ವಯಸ್ಸಿನವರೆಗೆ ಯುವಕರೆಂದು ನಿರ್ಧರಿಸಲಾಗುವುದು ;



(ಆ) ಆ ಪೈಕಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು ; ಇವರುಗಳ ಸಬಲೀಕರಣಕ್ಕೆ ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಣವನ್ನು ಮತ್ತು ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ; ಇದರಿಂದ ಎಷ್ಟು ಯುವಕರು ಪ್ರಯೋಜನ ಪಡೆದಿರುತ್ತಾರೆ ;

(ಇ) ಯುವಕರನ್ನು ಕ್ರೀಡೆಗಳಲ್ಲಿ ತೊಡಗುವಂತೆ ಉತ್ತೇಜಿಸಲು ಕಳೆದ ಎರಡು ವರ್ಷಗಳಲ್ಲಿ ಯಾವ ರೀತಿಯ ಕ್ರೀಡೆಗಳ ತರಬೇತಿಯನ್ನು ನೀಡಲಾಗಿದೆ ; ಈ ತರಬೇತಿ ಶಿಬಿರಗಳಿಂದ ಹೊರಬಂದಿರುವ ರಾಜ್ಯ ಮಟ್ಟದ ಹೊಸ ಪ್ರತಿಭೆಗಳ ಸಂಖ್ಯೆ ಎಷ್ಟು ; ತರಬೇತಿ ಶಿಬಿರಗಳನ್ನು ಎಲ್ಲೆಲ್ಲಿ ಆಯೋಜಿಸಲಾಗಿತ್ತು ? (ವಿವರ ನೀಡುವುದು)

## ಅರಣ್ಯ ಇಲಾಖಾ ಯೋಜನೆಯಡಿ ಕಾಮಗಾರಿಗಳು

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪ (೫೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಯಾವ ಯಾವ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ವಿಭಾಗವಾರು, ವಲಯವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯಲ್ಲಿ ಅರಣ್ಯ ಅಭಿವೃದ್ಧಿ ಕಾಮಗಾರಿಗೆ ನೀಡಲಾದ ಅನುದಾನವು ಸಮರ್ಪಕವಾಗಿ ಬಳಕೆಯಾಗುತ್ತಿದೆಯೇ ; (ವಿವರ ನೀಡುವುದು)

(ಇ) ಇಲಾಖೆಯಿಂದ ಜಿಲ್ಲೆಯಲ್ಲಿ ಅರಣ್ಯ ಪಾರ್ಕ್‌ನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ ; ಹಾಗಿದ್ದರೆ, ವಿವರ ನೀಡುವುದು ;

(ಈ) ರಾಜ್ಯದಲ್ಲಿ ಎಷ್ಟು ಎಕರೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಲಾಗಿದೆ ? (ವಿವರ ನೀಡುವುದು)

## ಯಶವಂತಪುರ ಹೋಬಳಿ, ನಾಗಸಂದ್ರ ಗ್ರಾಮದ ಸರ್ವೆ ನಂ ೬ ರಿಂದ ೧೩ರವರೆಗಿನ ಜಮೀನಿನ ಮೇಲಿನ ಹಕ್ಕಿನ ಬಗ್ಗೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೧೦೫ (೧೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕ್ ಯಶವಂತಪುರ ಹೋಬಳಿ ವ್ಯಾಪ್ತಿಗೆ ಬರುವ ನಾಗಸಂದ್ರ ಗ್ರಾಮದ ಸರ್ವೆ ನಂ.೬, ೭,೮,೯,೧೦,೧೧,೧೨ ಮತ್ತು ೧೩ರಲ್ಲಿ ಇರುವ ಒಟ್ಟು ಜಮೀನು ಎಷ್ಟು ; ಈ ಸರ್ವೆ ನಂಬರ್‌ಗಳಲ್ಲಿ ಶ್ರೀರಾಮ ಲಿಂಗೇಶ್ವರ ಮಠಕ್ಕೆ ಸೇರಿರುವ ಜಮೀನು ಎಷ್ಟು ; ಆ ಜಮೀನು ಯಾರ ಸುಪರ್ಧಿನಲ್ಲಿ ಇರುತ್ತದೆ ; ಅದರ ಮಾರುಕಟ್ಟೆ ಬೆಲೆ ಏನು ;

(ಆ) ಶ್ರೀರಾಮ ಲಿಂಗೇಶ್ವರ ಮಠಕ್ಕೆ ವಾರಸುದಾರರು ಯಾರು ; ಅವರು ಏನಾದರು ಈ ಜಮೀನಿನ ಮೇಲೆ ಹಕ್ಕನ್ನು ಹೊಂದಿದ್ದಾರೆಯೇ ; ಇಲ್ಲದಿದ್ದರೆ ಯಾರು ಹಕ್ಕನ್ನು ಹೊಂದಿದ್ದಾರೆ ? (ಮಾಹಿತಿಯನ್ನು ಒದಗಿಸುವುದು)



## ಕಾಡು ಪ್ರಾಣಿಗಳ ದಾಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ರಕ್ಷಣಾ ಕ್ರಮಗಳ ಬಗ್ಗೆ.

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೬ (೧೨೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆನೆಗಳು ನಾಡಿಗೆ ಬಂದು ರೈತರ ಮೇಲೆ ದಾಳಿಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದುವರೆಗೂ ಹಲ್ಲೆಗೊಳಗಾದವರ ಸಂಖ್ಯೆ ಎಷ್ಟು ಹಾಗೂ ಸಾವಿಗೀಡಾದವರ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವ್ಯಕ್ತಿವಾರು ವಿವರ ನೀಡುವುದು) ಇವರುಗಳಿಗೆ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು ;

(ಆ) ಆನೆಗಳ ದಾಳಿಯಿಂದ ಎಷ್ಟು ಪ್ರಮಾಣದ ಬೆಳೆ ಹಾನಿಯಾಗಿದೆ ; ಇದಕ್ಕೆ ಪರಿಹಾರ ನೀಡಲಾಗಿದೆಯೇ ; ನೀಡಿದ್ದಲ್ಲಿ ಇದುವರೆಗೂ ನೀಡಿರುವ ಪರಿಹಾರದ ಮೊತ್ತ ಎಷ್ಟು ; ನೀಡಲು ಬಾಕಿಯಿರುವ ಪರಿಹಾರದ ಮೊತ್ತವೆಷ್ಟು ; ಆನೆಗಳ ದಾಳಿಯನ್ನು ತಡೆಯಲು ಸರ್ಕಾರ ಯಾವುದಾದರೂ ಶಾಶ್ವತ ಕ್ರಮ ಕೈಗೊಂಡಿದೆಯೇ ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಇತರೇ ಕಾಡು ಪ್ರಾಣಿಗಳಿಂದ ಸಾರ್ವಜನಿಕರ ಮೇಲೆ ನಡೆದ ದಾಳಿಯ ಜಿಲ್ಲಾವಾರು ವಿವರ ನೀಡುವುದು ; ಹೀಗೆ

ನಡೆಯುತ್ತಿರುವ ದಾಳಿಯಿಂದ ಸಾರ್ವಜನಿಕರನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ರಕ್ಷಣಾ ಕ್ರಮಗಳೇನು ?

## ನೂತನ ತಾಲ್ಲೂಕುಗಳ ರಚನೆ ಬಗ್ಗೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೧೦೭ (೧೨೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನೂತನ ತಾಲ್ಲೂಕುಗಳ ರಚನೆಯ ಬಗ್ಗೆ ಸರ್ಕಾರ ಈಗಾಗಲೇ ಘೋಷಣೆ ಮಾಡಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ನೂತನವಾಗಿ ಎಷ್ಟು ತಾಲ್ಲೂಕುಗಳನ್ನು ರಚಿಸುವುದಾಗಿ ಸರ್ಕಾರ ಘೋಷಿಸಿದೆ ;

(ಇ) ನೂತನ ತಾಲ್ಲೂಕುಗಳ ಕಾರ್ಯಾರಂಭಕ್ಕೆ ಸರ್ಕಾರ ಯಾವಾಗ ಆದೇಶ ಹೊರಡಿಸಲಿದೆ ;

(ಈ) ಹೊಸ ಕಂದಾಯ ಉಪ ವಿಭಾಗಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ ;

(ಉ) ಹಾಗಿದ್ದಲ್ಲಿ, ಎಷ್ಟು ನೂತನ ಕಂದಾಯ ಉಪ ವಿಭಾಗಗಳನ್ನು ರಚಿಸಲಾಗುವುದು ; ಅವು ಎಂದಿನಿಂದ ಕಾರ್ಯಾರಂಭ ಮಾಡಲಿವೆ ?



## ಕಲಬುರಗಿ ಜಿಲ್ಲೆಯ ಬೆಳೆ ಹಾನಿ ಪ್ರಕರಣಗಳ ಪರಿಹಾರಕ್ಕೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೧೦೮ (೧೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಎಕರೆ ಬೆಳೆ ಹಾನಿಯಾಗಿದೆ ; ಯಾವ ಕಾರಣಗಳಿಂದ ಹಾನಿಯಾಗಿರುತ್ತದೆ ;

(ಆ) ಬೆಳೆ ಹಾನಿಯಾಗಿರುವಂತಹ ರೈತರಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ ; ಯಾವ ಯಾವ ಬೆಳೆಗೆ ಎಷ್ಟೆಷ್ಟು ಎಕರೆಗೆ ಪರಿಹಾರ ನೀಡಲಾಗಿದೆ ; (ವಿವರ ಒದಗಿಸುವುದು)

(ಇ) ಕಳೆದ ೨ ವರ್ಷಗಳಲ್ಲಿ ಎಲ್ಲಾ ಬೆಳೆ ಹಾನಿ ಪ್ರಕರಣಗಳಿಗೆ ಪರಿಹಾರ ಒದಗಿಸಲಾಗಿದೆಯೇ ; ಎಷ್ಟು ಪ್ರಕರಣಗಳಲ್ಲಿ ಬಾಕಿ ಇದೆ ; ಬಾಕಿ ಇರುವುದಕ್ಕೆ ಕಾರಣಗಳೇನು ? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಚಾಲ್ತಿಯಲ್ಲಿರುವ ಬಗ್ಗೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) :–**

೧೦೯ (೨೦೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಾದ್ಯಂತ ಬಾಲಕಾರ್ಮಿಕ ಪದ್ಧತಿ ಜೀವಂತ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಈ ಪದ್ಧತಿಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ;

(ಆ) ಕಲಬುರಗಿ ಜಿಲ್ಲೆಯಲ್ಲಿರುವ ಬಾಲ ಕಾರ್ಮಿಕ ಶಾಲೆಗಳ ಸಂಖ್ಯೆ ಎಷ್ಟು; ವರ್ಷಕ್ಕೆ ಎಷ್ಟು ಅನುದಾನ ನೀಡಲಾಗುತ್ತಿದೆ;

(ಇ) ಸರ್ಕಾರ ಬಾಲ ಕಾರ್ಮಿಕ ಶಾಲೆಗಳನ್ನು ತೆರೆದು ಖಾಸಗಿ ಸಂಸ್ಥೆಗಳಿಗೆ ವಾರ್ಷಿಕ ಅನುದಾನ ಒಳಪಡಿಸುತ್ತಿರುವುದು ಸಮಂಜಸವಾಗಿದೆಯೇ ; ಖಾಸಗಿಯವರು ನಡೆಸುತ್ತಿರುವ ಬಾಲ ಕಾರ್ಮಿಕ ಶಾಲೆಗಳು ಕೇವಲ ಅನುದಾನ ಪಡೆದುಕೊಳ್ಳಲು ಮಾತ್ರ ಸೀಮಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಲಗ್ಗೆರೆ ಸರ್ವೆ ನಂ. ೭/೧ಎ ರಲ್ಲಿ ವಿಧಾನಸೌಧ ಬಡಾವಣೆಯ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦ (೧೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲಗ್ಗೆರೆ ಸರ್ವೆ ನಂ. ೭/೧ಎ ರಲ್ಲಿನ ವಿಧಾನಸೌಧ ಬಡಾವಣೆಯ ೧೫ ಎಕರೆ ಜಮೀನಿನಲ್ಲಿನ ಸುಮಾರು ೩೨೦ ನಿವೇಶನಗಳನ್ನು ಜಿ.ಪಿ.ಎ. ಹೋಲ್ಡರ್‌ರವರು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ರಾಜಾಜಿನಗರ ಉಪನೋಂದಣಿ ಕಚೇರಿಯಲ್ಲಿ ಯಾವ ಆಧಾರದ ಮೇಲೆ ನೋಂದಣಿ ಮಾಡಿಕೊಟ್ಟಿರುತ್ತಾರೆ; ಸದರಿ ನೋಂದಣಿಯ ಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ಸದರಿ ಸ್ವತ್ತಿಗೆ ಯಾವ ಯಾವ ಭೂಮಾಲೀಕರು ದಿನಾಂಕ ೧೨-೧-೧೯೯೮ ಹಾಗೂ ೨-೧-೧೯೯೮ ರಲ್ಲಿ ಯಾರ ಯಾರ ಹೆಸರಿಗೆ ಜಿ.ಪಿ.ಎ. ಹಾಗೂ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ; ಸದರಿ ಪತ್ರಗಳ ಪ್ರತಿಗಳನ್ನು ಒದಗಿಸುವುದು ;



(ಇ) ೧೫ ವರ್ಷಗಳ ಹಿಂದೆಯೇ, ನೋಂದಣಿಯಾಗಿ ನಗರಪಾಲಿಕೆಗೆ ತೆರಿಗೆ ಪಾವತಿಸಿರುವ ಸದರಿ ಎಷ್ಟು ನಿವೇಶನಗಳನ್ನು ಇತ್ತೀಚೆಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ನಕಲಿ ದಾನ ಪತ್ರದ ಆಧಾರದ ಮೇಲೆ ಯಾರ ಯಾರ ಹೆಸರಿಗೆ ೨ನೇ ಬಾರಿಗೆ ನೋಂದಣಿ ಮಾಡಿಕೊಡಲಾಗಿದೆ ; ಸದರಿ ನೋಂದಣಿಗಳ ಪೂರ್ಣ ವಿವರಗಳನ್ನು ಒದಗಿಸುವುದು ;

(ಈ) ಮೇಲ್ಕಂಡ ಕಾನೂನು ಬಾಹಿರ ನೋಂದಣಿಗಳನ್ನು ರದ್ದುಪಡಿಸುವಂತೆ ಕೋರಿ ಬಂದಿರುವ ಮನವಿಗಳ ಸಂಖ್ಯೆ ಎಷ್ಟು; (ಮನವಿದಾರರ ವಿವರ ನೀಡುವುದು) ಹಾಗೂ ಈ ನೋಂದಣಿಗಳನ್ನು ರದ್ದುಪಡಿಸಲು ಕಂದಾಯ ಇಲಾಖೆಯ ಉನ್ನತಾಧಿಕಾರಿಗಳು ಈವರೆವಿಗೂ ಕೈಗೊಂಡಿರುವ ಕ್ರಮಗಳೇನು?

## ಅತಿವೃಷ್ಟಿಯಿಂದ ತೆಂಗಿನ ತೋಟಗಳಿಗೆ ನಷ್ಟ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧ (೧೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಮುತ್ತಗದಹಳ್ಳಿ ಗ್ರಾಮದ ಸರ್ವೆ ನಂ. ೯೦ ಮತ್ತು ೯೧ರ ತೆಂಗಿನ ತೋಟಗಳಿಗೆ ನಾಗಲಪುರ ಕೆರೆ ಹಳ್ಳದ ಪ್ರವಾಹದ ಅತಿವೃಷ್ಟಿಯಿಂದಾಗುತ್ತಿರುವ ಹಾನಿ ತಪ್ಪಿಸಲು ಕಲ್‌ವರ್ಟ್ ತಡೆಗೋಡೆ ಕಾಮಗಾರಿಗೆ ೨೦೧೪-೧೫ನೇ ಸಾಲಿನೊಳಗೆ ರೂ.೩೦.೭೫ ಲಕ್ಷವನ್ನು ಎನ್.ಡಿ.ಎಂ.ಸಿ. ಯೋಜನೆಯಡಿ ಮಂಜೂರು ಮಾಡಲಾಗುವುದೆಂದು ಸರ್ಕಾರ ಭರವಸೆ ನೀಡಿರುವುದು ನಿಜವಲ್ಲವೆ ;

(ಆ) ಮೇಲ್ಕಂಡ ಅತಿವೃಷ್ಠಿಯಿಂದ ರೈತರಿಗೆ ಆಗುತ್ತಿರುವ ನಷ್ಟ ತಪ್ಪಿಸಲು, ಯೋಜನೆಯಡಿ ಕಾಮಗಾರಿಗೆ ಹಣ ಮಂಜೂರಾಗಿದೆಯೇ; ಇಲ್ಲದಿದ್ದಲ್ಲಿ ಸದರಿ ಕಾಮಗಾರಿ ಮಂಜೂರಾತಿ ಪಡೆಯಲು ಸಂಬಂಧಿಸಿದ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಯವರು ಈವರೆವಿಗೆ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ಒದಗಿಸುವುದು)

(ಇ) ೨೦೧೫ರ ಮಳೆಗಾಲದ ಜೂನ್ ತಿಂಗಳೊಳಗೆ ಸದರಿ ಕಾಮಗಾರಿ ಕೈಗೊಂಡು ರೈತರಿಗಾಗುತ್ತಿರುವ ನಷ್ಟ ತಪ್ಪಿಸಲು ಸರ್ಕಾರದಿಂದ ಕೈಗೊಳ್ಳುವ ಕ್ರಮಗಳೇನು ;

(ಈ) ಈಗಾಗಲೇ ನಷ್ಟಕ್ಕೊಳಗಾಗಿರುವ ಮೇಲ್ಕಂಡ ಜಮೀನುಗಳ ರೈತರಿಗೆ ಪರಿಹಾರ ನೀಡಲು ಕೈಗೊಂಡಿರುವ ಕ್ರಮವೇನು ?

## ಬೀದರ್ ಜಿಲ್ಲೆಯಲ್ಲಿನ ಅರಣ್ಯ ಅಭಿವೃದ್ಧಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೨ (೧೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಗೆ ೨೦೧೩–೧೪ ಹಾಗೂ ೨೦೧೪–೧೫ನೇ ಸಾಲಿನವರೆಗೆ ವಿವಿಧ ಯೋಜನೆಗಳ ಅಭಿವೃದ್ಧಿಗಾಗಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಬಿಡುಗಡೆ ಮಾಡಿದ ಅನುದಾನದ ಮೊತ್ತವೆಷ್ಟು ; (ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯೋಜನಾವಾರು ಅಂಕಿ–ಅಂಶಗಳೊಂದಿಗೆ ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)



(ಆ) ಹಾಗಿದ್ದಲ್ಲಿ, ಕಳೆದ ೨ ವರ್ಷಗಳಲ್ಲಿ ನೆಡುತೋಪು (ಪ್ಲಾಂಟೇಷನ್) ಯೋಜನೆ ಕಾಮಗಾರಿಯನ್ನು ಯಾವ ಯಾವ ವ್ಯಾಪ್ತಿಯಲ್ಲಿ ಎಷ್ಟು ಹೆಕ್ಟೇರಿನಲ್ಲಿ ಕೈಗೊಳ್ಳಲಾಗಿದೆ ;

(ಇ) ನೆಡುತೋಪು ಯೋಜನೆಗೆ ತಗುಲಿದ ಖರ್ಚು ವೆಚ್ಚ ಎಷ್ಟು, ಕೂಲಿಕಾರ್ಮಿಕರಿಗೆ ನೀಡಿದ ಹಣ ಎಷ್ಟು ? (ಕೂಲಿ ಕಾರ್ಮಿಕರ ಹೆಸರು ಮತ್ತು ವಿಳಾಸ, ಗುತ್ತಿಗೆ ನೀಡಿದ್ದಲ್ಲಿ ಗುತ್ತಿಗೆದಾರರ ಹೆಸರುಗಳೊಂದಿಗೆ ಅಂಕಿ–ಅಂಶಗಳೊಂದಿಗೆ ತಾಲ್ಲೂಕುವಾರು ಯೋಜನೆಗಳವಾರು ವರ್ಷವಾರು ಮಾಹಿತಿ ನೀಡುವುದು)

## ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವವರಿಗೆ ಹಕ್ಕುಪತ್ರ ವಿತರಣೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೩ (೧೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನಿನಲ್ಲಿ ಹಲವಾರು ವರ್ಷಗಳಿಂದ ಜನರು ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರಿ ಜಮೀನಿನಲ್ಲಿ ಎಷ್ಟು ಮಂದಿ ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೆ ; (ಜಿಲ್ಲಾ ತಾಲ್ಲೂಕುವಾರು ವಿವರ ನೀಡುವುದು)

(ಇ) ಇಂತಹವರಿಗೆ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ;

(ಈ) ಖಾಸಗಿ ಜಮೀನಿನಲ್ಲಿ ಮನೆ ನಿರ್ಮಿಸಿದ್ದರೆ ಎಷ್ಟು ವರ್ಷಗಳಲ್ಲಿ ಆ ಜಾಗವನ್ನು ಮನೆ ನಿರ್ಮಿಸಿದ ವ್ಯಕ್ತಿಗೆ ಸೇರುವಂತಾಗುತ್ತದೆ? (ಈ ಬಗ್ಗೆ ಮಾಹಿತಿ ನೀಡುವುದು)

## ಕಾರಂಜ ಜಲಾಶಯದಿಂದ ನೀರು ಬಿಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೪ (೧೩೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಕಾರಂಜ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ ಎಷ್ಟು ; ಮಾಹಿತಿ ನೀಡುವುದು ;

(ಆ) ಈ ಜಲಾಶಯದಿಂದ ಕಾರಂಜ ಮಾಜರಾ ನದಿಗೆ ನೀರು ಹರಿಸದೆ ಇರುವುದರಿಂದ ಮಾಜರಾ ನದಿಯ ದಡದ ರೈತರು ನೀರಿಲ್ಲದೇ ಕಂಗಾಲಾಗುತ್ತಿರುವುದು ಮತ್ತು ಬೆಳೆ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸರ್ಕಾರವು ರೈತರು ಬೆಳೆಸಿದ ಬೆಳೆಗೆ ಅನುಕೂಲ ಮಾಡಿಕೊಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;



(ಈ) ಕಾರಂಜ ಜಲಾಶಯದಿಂದ ತಿಂಗಳ ಅಂತ್ಯಕ್ಕೆ ನೀರು ಬೀಡುವ ವ್ಯವಸ್ಥೆ ಮಾಡುವುದರಿಂದ ನದಿಯ ಅಕ್ಕಪಕ್ಕದ ರೈತರ ಹಿತ ಕಾಪಾಡುವಂತಾಗುವುದರ ಉದ್ದೇಶ ಸರ್ಕಾರಕ್ಕೆ ಇದೆಯೇ; ಈ ನಿಟ್ಟಿನಲ್ಲಿ ಯಾವ ಕ್ರಮ ಹಮ್ಮಿಕೊಳ್ಳಲಾಗುವುದು ? (ಮಾಹಿತಿ ನೀಡುವುದು)

## ಬಡ ವಿದ್ಯಾರ್ಥಿಗಳಿಗೆ ಬಿಸಿಯೂಟದ ವ್ಯವಸ್ಥೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೫ (೧೩೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿಯನ್ನು ಪಡೆಯುವಂತಹ ಬಡ ರೈತರ ಮತ್ತು ಹಿಂದುಳಿದ ಕೂಲಿ ಕಾರ್ಮಿಕರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಜಾರಿಗೆ ತರುವಂತಹ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಆ) ಈ ಯೋಜನೆಯಿಂದ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದನ್ನು ಸರ್ಕಾರ ಮನಗೊಂಡಿದೆಯೇ;

(ಇ) ಹಾಗಿದ್ದಲ್ಲಿ, ಈ ಯೋಜನೆಗೆ ತಗಲುವ ವೆಚ್ಚವೆಷ್ಟು ; ಈ ಯೋಜನೆಯನ್ನು ಜಾರಿಗೆ ತರಲು ಕೈಗೊಂಡಿರುವ ಕ್ರಮಗಳೇನು?

## ಕಾವೇರಿ ಹೈ–ತೀರ್ಪಿನ ನಂತರ ಮತ್ತು ಮೊದಲು ಅಚ್ಚುಕಟ್ಟು ಪ್ರದೇಶ ವಿಸ್ತೀರ್ಣ

**ಶ್ರೀ ಅಶ್ವತನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೬ (೧೩೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ಹೈ–ತೀರ್ಪಿನ ನಂತರ ರಾಜ್ಯಕ್ಕೆ ಒದಗಿಸಿರುವ ನೀರಿನ ಪ್ರಮಾಣವೆಷ್ಟು ; ಇದರಲ್ಲಿ ಕೃಷಿಗಾಗಿ ಎಷ್ಟು ನೀರನ್ನು ಒದಗಿಸಲಾಗುತ್ತದೆ ;

(ಆ) ಹೈ–ತೀರ್ಪಿಗೂ ಮೊದಲು ಅಚ್ಚುಕಟ್ಟು ಪ್ರದೇಶ ಎಷ್ಟಿತ್ತು ; ಹೈ–ತೀರ್ಪಿನ ನಂತರ ಎಷ್ಟು ಎಕರೆಯನ್ನು ಅಚ್ಚುಕಟ್ಟು ಪ್ರದೇಶವೆಂದು ವಿಸ್ತರಿಸಿಕೊಳ್ಳಲು ಯೋಜನೆ ರೂಪಿಸಲಾಗಿದೆ ? (ರೂಪಿಸಿದ್ದರೆ, ತಾಲ್ಲೂಕುವಾರು ವಿವರ ನೀಡುವುದು)

## ಹೇಮಾವತಿಯಿಂದ ತಿಪ್ಪಗೊಂಡನಹಳ್ಳಿ ಡ್ಯಾಂಗೆ ಮತ್ತು ಮಂಚನಬೆಲೆ ಡ್ಯಾಂಗೆ ನೀರು ಹರಿಬಿಡುವ ಬಗ್ಗೆ

**ಶ್ರೀ ಅಶ್ವತನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೭ (೧೩೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೇಮಾವತಿಯಿಂದ ಕುಣಿಗಲ್‌ಗೆ ಹರಿದು ಬರುವ ನೀರನ್ನು ಲಿಫ್ಟ್ ಇರಿಗೇಷನ್ ಮುಖೇನ ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಸಂಗ್ರಹಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದರೆ, ಯಾವ ಹಂತದಲ್ಲಿದೆ; ಇದು ಸಚಿವ ಸಂಪುಟದಲ್ಲಿ ತೀರ್ಮಾನವಾಗಿರುವುದೇ; ತೀರ್ಮಾನಿಸಿದ್ದರೆ, ಈ ಯೋಜನೆಗಾಗಿ ಕಾಯ್ದಿರಿಸುವ ಹಣವೆಷ್ಟು ;



(ಆ) ಮಂಚನಬೆಲೆ ಡ್ಯಾಂ ನಿಂದ ಮಂಚನಬೆಲೆ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗಿದೆಯೆ; ಒದಗಿಸಿದ್ದರೆ, ಎಷ್ಟು ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲಾಗಿದೆ ; ಕಳೆದ ೫ ವರ್ಷಗಳಿಂದ ಮಂಚನಬೆಲೆ ಡ್ಯಾಂನ ನಾಲೆಗಳನ್ನು ಆಧುನೀಕರಣಗೊಳಿಸಲು ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ ? (ವರ್ಷವಾರು ವಿವರ ನೀಡುವುದು)

## ಬೆಂಗಳೂರು ನಗರ ಜಿಲ್ಲೆ ಮತ್ತು ಮಹಾನಗರದಲ್ಲಿ ಒತ್ತುವರಿ ಮಾಡಲಾಗಿದ್ದ ಜಾಗವನ್ನು ತೆರವುಗೊಳಿಸಿರುವ ಬಗ್ಗೆ

**ಶ್ರೀ ಅಶ್ವತನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೮ (೧೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆ ಮತ್ತು ಮಹಾನಗರದಲ್ಲಿ ತೆರವುಗೊಳಿಸಿದ ಸರ್ಕಾರ ಜಾಗವೆಷ್ಟು ; ಇದರಲ್ಲಿ ಕೆರೆಗಳೆಷ್ಟು; ಗೋಮಾಳಗಳೆಷ್ಟು, ಗುಂಡು ತೋಪುಗಳೆಷ್ಟು ; (ವಿವರ ನೀಡುವುದು)

(ಆ) ಸದ್ಯ ತೆರವುಗೊಳಿಸಿರುವ ಜಾಗಗಳನ್ನು ಇಲಾಖೆಗಳಿಗೆ ವರ್ಗಾಯಿಸಲಾಗಿದೆಯೇ; ವರ್ಗಾಯಿಸಿದ್ದರೆ, ವಿವರ ನೀಡುವುದು;

(ಇ) ಅಕ್ರಮ ಒತ್ತುವರಿ ಮಾಡಿಕೊಳ್ಳುವ ಸಂದರ್ಭದಲ್ಲಿ ಕಂದಾಯ ಇಲಾಖೆಯ ಯಾವ ಯಾವ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ; ಇಂತಹವರ ವಿರುದ್ಧ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮವೇನು ?

## ವಾಟರ್‌ಮನ್ ತಿಮ್ಮಯ್ಯನ ಮೇಲೆ ಕರಡಿ ದಾಳಿ

**ಶ್ರೀ ಅಶ್ವತನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೯ (೧೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಧುಗಿರಿ ತಾಲ್ಲೂಕಿನ ಗರಣಿ ಗ್ರಾಮ ಪಂಚಾಯಿತಿಯ ವಾಟರ್‌ಮನ್ ಕರಡಿ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದು ೪೧ ದಿನ ವೈದ್ಯರು ಚಿಕಿತ್ಸೆ ನೀಡಿದ್ದರೂ ಗುಣ ಮುಖನಾಗಿಲ್ಲ ; ಸರ್ಕಾರದಿಂದ ವೈದ್ಯಕೀಯ ಚಿಕಿತ್ಸೆಗೆ ಪರಿಹಾರ ನೀಡಲಾಗಿರುವುದೇ ;

(ಆ) ನೀಡಿದ್ದರೆ, ಎಷ್ಟು ಪರಿಹಾರ ನೀಡಲಾಗಿದೆ ಗಾಯಾಳುವನ್ನು ನೋಡಲು ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿರುವರೇ; ಸದ್ಯದ ಪರಿಸ್ಥಿತಿ ಹೇಗಿದೆ ? (ವಿವರ ನೀಡುವುದು)

## ಅನುಚ್ಛೇದ ೩೭೧/(J) ಸಂಬಂಧ ದೃಢೀಕರಣ ಪತ್ರಗಳ ನಿಲುಗಡೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೨೦ (೧೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾರತ ಸಂವಿಧಾನ ೩೭೧/(J) ಅನುಚ್ಛೇದ ಸೇರ್ಪಡೆ ತರುವಾಯ, ರಾಜ್ಯ ಸರ್ಕಾರ ಹೊರಡಿಸಿದ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರಗಳ ಮೀಸಲಾತಿ ಸೌಲಭ್ಯಗಳನ್ನು ಪಡೆಯಲು, ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಜನಿಸಿ, ವಾಸಿಸಿದವರು 'ವಾಸ ಸ್ಥಳ ದೃಢೀಕರಣ ಪತ್ರ' ಕೋರಿ ಸಲ್ಲಿಸಿರುವ ಮನವಿಗಳನ್ನು ಬಾಕಿಯಿಟ್ಟು, ದೃಢೀಕರಣ ಪತ್ರಗಳನ್ನು ನೀಡಲು ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಬಂದಿದ್ದಲ್ಲಿ, ಕಾರಣಗಳೇನು; ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ವಿಳಂಬದಿಂದಾಗಿ ಪ್ರವೇಶ ಪಡೆಯಲು ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಗಳನ್ನು ಸರ್ಕಾರ ತುರ್ತಾಗಿ ಬಗೆಹರಿಸುವುದೇ ?

## ಮೇಕೆದಾಟು ನೀರಾವರಿ ಯೋಜನೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೨೧ (೧೪೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಡಿಯುವ ನೀರಿಗಾಗಿ ಕೈಗೆತ್ತಿಕೊಳ್ಳಲಾದ ಕಾವೇರಿ ಕೊಳ್ಳದ ಮೇಕೆದಾಟು ನೀರಾವರಿ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ತಮಿಳುನಾಡು ರಾಜ್ಯವು ಈ ವಿಷಯದಲ್ಲಿ ತಕರಾರು ತೆಗೆದಿರುವುದು ನಿಜವೇ ;

(ಆ) ಈ ಸಂಬಂಧ ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಜಲಾಶಯ ನಿರ್ಮಿಸಿ ರಾಜ್ಯದ ಪಾಲಿನ ನೀರನ್ನು ಶೇಖರಿಸಲು ಸರ್ಕಾರ ಕಾನೂನು ಹೋರಾಟ ನಡೆಸಲು ಕೈಗೊಂಡಿರುವ ಕ್ರಮಗಳೇನು ?

## ನಗರದೊಳಗೆ ಕಾಡುಪ್ರಾಣಿಗಳ ಹಾವಳಿ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೨೨ (೧೪೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಡುಪ್ರಾಣಿಗಳು ಅರಣ್ಯದಿಂದ ನಗರದೊಳಗೆ ಬಂದು ನಾಗರೀಕರ ಮೇಲೆ ಮಾರಣಾಂತಿಕ ಹಲ್ಲೆ ಹಾಗೂ ರೈತರ ಹೊಲ ಗದ್ದೆಗಳ ಪಸಲನ್ನು ಹಾಳು ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಆ) ಇಂತಹ ಅವಘಡಗಳನ್ನು ಖಾಯಂ ಆಗಿ ತಪ್ಪಿಸಲು ಸರ್ಕಾರ ಯಾವುದಾದರೂ ಅಧ್ಯಯನ ಮಾಡಿದೆಯೇ ? (ಮಾಡಿದ್ದಲ್ಲಿ ವಿವರಗಳನ್ನೊದಗಿಸುವುದು)

## ಪ್ಲಾಸ್ಟಿಕ್ ಉತ್ಪಾದನೆಗಾಗಿ ಮಾರಾಟ ನಿಷೇಧ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೧೨೩ (೧೪೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ಲಾಸ್ಟಿಕ್ ಉತ್ಪಾದನೆಯ ಎಷ್ಟು ಘಟಕ/ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನೋಂದಣಿಯಾಗಿ ಅದರ ನಿಯಂತ್ರಣದಲ್ಲಿವೆ ;



(ಆ) ನಾಗರೀಕರ ಮತ್ತು ಪ್ರಾಣಿಗಳ ಆರೋಗ್ಯ ಹಿತರಕ್ಷಣೆಗಾಗಿ ಈ ಪ್ಲಾಸ್ಟಿಕ್ ಉತ್ಪಾದನೆ ಮತ್ತು ಮಾರಾಟವನ್ನು ನಿಷೇಧಿಸಬೇಕೆಂದು ಯಾರಿಂದಲಾದರೂ ಸರ್ಕಾರಕ್ಕೆ ನಿರ್ದೇಶನಗಳು ಬಂದಿವೆಯೇ; ಅಥವಾ ಸರ್ಕಾರವೇ ನಿಷೇಧಿಸಲು ಉದ್ದೇಶವನ್ನು ಹೊಂದಿದೆಯೇ ? (ವಿವರ ನೀಡುವುದು)

## ಅಸಂಘಟಿತ ಕಾರ್ಮಿಕರ ವಲಯಕ್ಕೆ ಇ.ಎಸ್.ಐ ಸೌಲಭ್ಯ ನೀಡುವ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೨೪ (೧೪೮) ಮಾನ್ಯ, ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮನೆಗೆಲಸ ಮಾಡುವವರನ್ನು ಇತರ ಉದ್ಯೋಗಿಗಳಂತೆ ಪರಿಗಣಿಸಲಾಗಿದೆಯೇ ;

(ಆ) ಪರಿಗಣಿಸಿಲ್ಲವಾದಲ್ಲಿ ಈ ರೀತಿ ಪರಿಗಣಿಸುವ ಚಿಂತನೆ ಸರ್ಕಾರಕ್ಕಿದೆಯೇ ;

(ಇ) ಅಸಂಘಟಿತ ಕಾರ್ಮಿಕ ವಲಯಕ್ಕೆ ಸರ್ಕಾರ ಇ.ಎಸ್.ಐ. ಸೌಲಭ್ಯ ನೀಡುವಲ್ಲಿ ಕ್ರಮ ಕೈಗೊಳ್ಳುವುದೆ ;

(ಈ) ಇಲ್ಲವಾದಲ್ಲಿ ಪ್ರಸ್ತುತ ಅವರಿಗೆ ಯಾವ ರೀತಿಯ ವೈದ್ಯಕೀಯ ಸೌಲಭ್ಯ ನೀಡಲು ಸರ್ಕಾರ ಚಿಂತಿಸಿದೆ ?

## ತುಮಕೂರಿನ ಮಲ್ಲಸಂದ್ರ ಕೆರೆಯಲ್ಲಿ ಆನೆಗಳ ಬೀಡು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೨೫ (೧೯೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಬನ್ನೇರುಘಟ್ಟ, ಸಾವನದುರ್ಗ, ಕನಕಪುರ ಮುಂತಾದ ಕಡೆಗಳಿಂದ ಬಂದು ತುಮಕೂರಿನ ಮಲ್ಲಸಂದ್ರ ಕೆರೆಯಲ್ಲಿ ಆನೆಗಳ ಬೀಡುಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಎಷ್ಟು ಆನೆಗಳು ಎಷ್ಟು ತಿಂಗಳುಗಳಿಂದ ಬೀಡು ಬಿಟ್ಟಿವೆ ;

(ಇ) ಇವುಗಳ ಆಹಾರಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ ;

(ಈ) ಸದಾ ನೀರಿನಲ್ಲೆ ಇವುಗಳು ಇರುವುದು ನಿಜವೇ; ಹೆಚ್ಚು ಸಮಯ ನೀರಿನಲ್ಲಿದ್ದಲ್ಲಿ ಆನೆಗಳು ಪುರುಷತ್ವ ಕಳೆದುಕೊಳ್ಳುತ್ತವೆ ಎನ್ನುವ ಸಂಗತಿ ನಿಜವೇ; ನಿಜವಾಗಿದ್ದಲ್ಲಿ, ಈ ಆನೆಗಳನ್ನು ವಾಪಸ್ಸು ಕಳುಹಿಸಲು ಏನು ಕ್ರಮ ಕೈಗೊಳ್ಳಲಾಗಿದೆ ?

## ಡಾ॥ ಕಸ್ತೂರಿ ರಂಗನ್ ವರದಿ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೨೬ (೨೦೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ॥ ಕಸ್ತೂರಿ ರಂಗನ್ ರವರು ಅರಣ್ಯ ಮತ್ತು ಪರಿಸರ ರಕ್ಷಣೆ ಕುರಿತಂತೆ ಸಲ್ಲಿಸಿರುವ ವರದಿಯನ್ವಯ ಕೇಂದ್ರ ಸಚಿವಾಲಯವು ಕರಡು ಅಧಿಸೂಚನೆ ಪ್ರಕಟಿಸಿರುವುದು ನಿಜವೇ; ಈ ಕುರಿತು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಆಕ್ಷೇಪಣೆ ಏನಾದರೂ ಇದ್ದಲ್ಲಿ ಸಲ್ಲಿಸಲು ಸೂಚಿಸಿರುವುದು ನಿಜವೇ; ನಿಜವಾಗಿದ್ದಲ್ಲಿ, ಆಕ್ಷೇಪಣೆ ಸಲ್ಲಿಸಲು ನೀಡಿರುವ ಅಂತಿಮ ಗಡುವು ಏನು ;



(ಆ) ಈ ಸಂಬಂಧ ಸರ್ಕಾರದಿಂದ ಆಕ್ಷೇಪಣೆಗಳನ್ನು ಸಲ್ಲಿಸಲಾಗಿದೆಯೇ ;

(ಇ) ಡಾ॥ ಕಸ್ತೂರಿ ರಂಗನ್‌ರವರ ವರದಿ ಕುರಿತಂತೆ ಅಲ್ಲಿನ ಗ್ರಾಮಗಳು ಮತ್ತು ನಿವಾಸಿಗಳ ಮೇಲೆ ಉಂಟಾಗುವ ಪರಿಣಾಮಗಳೇನು; ಎಷ್ಟು ಗ್ರಾಮಗಳು ಮತ್ತು ಎಷ್ಟು ಕುಟುಂಬಗಳು ಈ ವ್ಯಾಪ್ತಿಗೆ ಬರುತ್ತವೆ ?

## ಚಹಾ ಹಾಗೂ ಕಾಫಿ ತೋಟಗಳ ಕಾರ್ಮಿಕರು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೨೭ (೧೪೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಚಹಾ ಮತ್ತು ಕಾಫಿ ತೋಟಗಳ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕಾರ್ಮಿಕರು ಗೌರವಯುತ ಮತ್ತು ಆರೋಗ್ಯಕರ ಜೀವನ ನಡೆಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಮತ್ತು ಅನುಕೂಲ ಕಲ್ಪಿಸಲಾಗಿದೆ ;

(ಇ) ಕಾರ್ಮಿಕರ ಭವಿಷ್ಯ ಕುರಿತಂತೆ ಸರ್ಕಾರದ ಚಿಂತನೆ ಏನು ?

## ನಗರಗಳ ಹೆಸರು ಬದಲಾವಣೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೨೮ (೧೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ನಗರಗಳ ಹೆಸರು ಬದಲಾವಣೆಗೆ ಆದೇಶವಾಗಿರುವುದು ನಿಜವೇ ;

(ಆ) ಆಗಿದ್ದಲ್ಲಿ, ಯಾವ ಯಾವ ನಗರಗಳ ಹೆಸರಿನಲ್ಲಿ ಯಾವ ರೀತಿಯಲ್ಲಿ ಬದಲಾವಣೆ ಮಾಡಲಾಗಿದೆ ;

(ಇ) ಈ ರೀತಿ ಹೆಸರಿನ ಬದಲಾವಣೆಯಲ್ಲಿರುವ ವಿಶೇಷತೆ ಏನು ಮತ್ತು ಕಾರಣಗಳೇನು ? (ಪ್ರತ್ಯೇಕ ವಿವರ ನೀಡಿ)

## ವಂಶವೃಕ್ಷ ಪ್ರಮಾಣಪತ್ರ ಪಡೆಯಲು ತೊಂದರೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೨೯ (೧೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಾದ್ಯಂತ ಉಪ ತಹಶೀಲ್ದಾರ್ ಕಚೇರಿಗಳಲ್ಲಿ ವಂಶವೃಕ್ಷ ಪ್ರಮಾಣಪತ್ರ ಪಡೆಯಲು ಇತ್ತೀಚಿನ ದಿನಗಳಲ್ಲಿ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇತ್ತೀಚಿನ ಸುತ್ತೋಲೆಯಲ್ಲಿ ತಾತ ಹಾಗೂ ಅಜ್ಜಿಯ ಹೆಸರಿನ ಮರಣ ಸಮರ್ಥನೆಯ ಪತ್ರ ಕೇಳಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಇ) ಹಾಗಿದ್ದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸರಳೀಕರಣ ಮಾಡಿ ಪ್ರಮಾಣಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

## ರಾಜ್ಯದ ಬಡ ನೇಕಾರರಿಗೆ ನೀಡಿರುವ ತರಬೇತಿ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೦ (೧೫೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೦೯–೧೦ ರಿಂದ ೨೦೧೩–೧೪ ರವರೆಗೆ ರಾಜ್ಯದಲ್ಲಿರುವ ಬಡ ನೇಕಾರರಿಗೆ ಯಾವ ರೀತಿ ತರಬೇತಿ ನೀಡಲಾಗಿದೆ ;

(ಆ) ಕೈಮಗ್ಗ ನೇಕಾರರಿಗೆ ಹಾಗೂ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರಿಗೆ ಯಾವ ರೀತಿಯ ತರಬೇತಿಗಳನ್ನು ನೀಡಲಾಗಿದೆ; ಇದಕ್ಕಾಗಿ ಖರ್ಚಾಗಿರುವ ಮೊತ್ತು ಎಷ್ಟು ; (ವಿವರ ನೀಡುವುದು)

(ಇ) ಪ್ರತಿ ವರ್ಷ ಎಷ್ಟು ಬಡ ನೇಕಾರರಿಗೆ ತರಬೇತಿ ನೀಡಲಾಗಿದೆ ; (ತರಬೇತಿ ಪಡೆದ ಫಲಾನುಭವಿಗಳ ಹೆಸರು, ವಿಳಾಸ ಸಮೇತ ಸಂಪೂರ್ಣ ಪ್ರತ್ಯೇಕ ಮಾಹಿತಿ ನೀಡುವುದು)

(ಈ) ತರಬೇತಿ ಪಡೆದ ನಂತರ ಸವಲತ್ತುಗಳೇನು; ಶೆಡ್, ಮನೆ, ಮಗ್ಗಗಳು ಸಲಕರಣೆಗಳ ಸಹಿತ ವಿವರ ನೀಡುವುದು ? (ಪ್ರತಿಯೊಬ್ಬರಿಗೆ ನೀಡಿರುವ ಹಣದ ವಿವರ ನೀಡುವುದು)

## ರಾಜ್ಯದ ಬಡ–ನೇಕಾರರಿಗೆ ವಸತಿ ಕಾರ್ಯಾಗಾರ ಸಹಾಯಧನ ಹೆಚ್ಚಿಸುವ ಬಗ್ಗೆ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೧ (೧೫೨) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಡ–ನೇಕಾರರು ಹಾಗೂ ಕೂಲಿ ಕಾರ್ಮಿಕ ನೇಕಾರರು ವಸತಿ ಹಾಗೂ ಕಾರ್ಯಾಗಾರ ನಿರ್ಮಾಣ ಮಾಡಲು ಸರ್ಕಾರದ ಮಾನದಂಡವೇನು ;

(ಆ) ಸಾಮಾನ್ಯ ವರ್ಗದ ನೇಕಾರರು ಮನೆ ಹಾಗೂ ಕಾರ್ಯಾಗಾರ ಮಾಡಿಕೊಳ್ಳಲು ಸರ್ಕಾರ ಇದೂವರೆಗೆ ನೀಡುತ್ತಿರುವ ಸಹಾಯಧನವೆಷ್ಟು ;

(ಇ) ಸದರಿ ಯೋಜನೆ ಅಡಿ ಬಡನೇಕಾರರಿಗೆ ಸರ್ಕಾರ ನೀಡುತ್ತಿರುವ ಸಹಾಯಧನ ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ;

(ಈ) ಹಾಗಿದ್ದಲ್ಲಿ, ಈ ವರ್ಷದಿಂದ ವಸತಿ ಕಾರ್ಯಾಗಾರದ ಸಹಾಯಧನವನ್ನು ರೂ.೩.೦೦ ಲಕ್ಷಗಳಿಗೆ ಹೆಚ್ಚಿಸಲು ಕ್ರಮಕೈಗೊಳ್ಳುವುದೇ; ಮುಂದಿನ ಆಯ–ವ್ಯಯದಲ್ಲಿ ಜಾರಿಗೆ ತರಲಾಗುವುದೇ; ಹೌದಾದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು ?



## ರಾಜ್ಯದ ಬಡ–ನೇಕಾರರಿಗೆ ಹೊಸ ಬಡಾವಣೆ ಮಾಡುವ ಕುರಿತು

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೨ (೧೫೦) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಬಡ–ನೇಕಾರರು ನಗರ ಪ್ರದೇಶದಲ್ಲಿ ವಾಸ ಹಾಗೂ ನೇಕಾರಿಕೆ ಉದ್ಯಮ ಮಾಡಲು ಕಷ್ಟಕರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಲಾಖೆಯು ಜಿಲ್ಲೆಗಳಲ್ಲಿ, ನಗರಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ನೇಕಾರಿಕೆ ಮಾಡಲು ಶೆಡ್ ಸಮೇತ ಮನೆ ಕಟ್ಟಿ ಪ್ರತ್ಯೇಕ ಬಡಾವಣೆ ಮಾಡಲು ಯೋಚಿಸಿದೆಯೇ ;

(ಇ) ಹಾಗಿದ್ದಲ್ಲಿ, ನಿವೇಶನ ಮಾಡಲು ಸರ್ಕಾರಿ ಭೂಮಿಯನ್ನು ಪಡೆಯುವ ಬಗ್ಗೆ ಪತ್ರ ವ್ಯವಹಾರ ಮಾಡಲಾಗಿದೆ; ಯಾವ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಎಷ್ಟು ನಿವೇಶನ ಎಂಬ ಬಗ್ಗೆ ಮಾಹಿತಿ ನೀಡುವುದು ;

(ಈ) ಆದ್ಯವಚನಕಾರರಾದ ಹಾಗೂ ಪ್ರಥಮ ನೇಕಾರರಾದ ಶ್ರೀ ದೇವರದಾಸಿಮಯ್ಯ ನವರ ಹೆಸರಿನಲ್ಲಿ ನೇಕಾರ ಬಡಾವಣೆ ನಿರ್ಮಾಣ ಮಾಡಲು ಸರ್ಕಾರ ಚಿಂತಿಸಿದೆಯೇ ;

(ಉ) ಸದರಿ ಯೋಜನೆಗೆ ಈ ವರ್ಷದ ಆಯ–ವ್ಯಯದಲ್ಲಿ ಹಣ ಒದಗಿಸಲಾಗುವುದೇ ?

## ನೇಕಾರರಿಗೆ ಬಡ್ಡಿ ಸಹಾಯಧನ ನೀಡಲು ವಿಳಂಬ

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೧೩೩ (೧೫೧) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಡ–ನೇಕಾರರಿಗೆ ಶೇ.೩ರ ಬಡ್ಡಿದರದಲ್ಲಿ ಸಹಕಾರ ಸಂಘಗಳು ಹಾಗೂ ಬ್ಯಾಂಕ್‌ಗಳ ಮುಖಾಂತರ ಸಾಲ ನೀಡುವ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ ;

(ಆ) ರಾಜ್ಯಾದ್ಯಂತ ಇದೂವರೆಗೆ ಸಹಕಾರ ಸಂಘಗಳು ಹಾಗೂ ಬ್ಯಾಂಕ್‌ಗಳ ಮೂಲಕ ಸಾಲ ಪಡೆದ ನೇಕಾರರ ಸಂಖ್ಯೆ ಎಷ್ಟು; ಪಡೆದಿರುವ ಸಾಲದ ಮೊತ್ತ ಎಷ್ಟು ; (ವಿವರ ನೀಡುವುದು)

(ಇ) ಸರ್ಕಾರ ನೀಡುತ್ತಿರುವ ಗರಿಷ್ಠ ಬಡ್ಡಿ ಸಹಾಯಧನ ಅನೇಕ ವರ್ಷಗಳಿಂದ ನೇಕಾರರಿಗೆ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಡ್ಡಿ ಸಹಾಯಧನ ಕೋರಿ ರಾಜ್ಯಾದ್ಯಂತ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಉ) ಆ ಪೈಕಿ ಇತ್ಯರ್ಥ ಪಡಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; ಇದಕ್ಕೆ ಕಾರಣಗಳೇನು ? (ವಿವರ ನೀಡುವುದು)



## "ಆನೆ ಕಾರಿಡಾರ್" ನಿರ್ಮಾಣ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೪ (೧೮೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ "ಆನೆ ಕಾರಿಡಾರ್" ನಿರ್ಮಾಣ ಮಾಡಲು ಸರ್ಕಾರ ನಿರ್ಣಯ ಕೈಗೊಂಡಿದೆ ;

(ಆ) ಹಾಗಿದ್ದಲ್ಲಿ, ಅದಕ್ಕೆ ಬೇಕಾಗುವ ಜಮೀನಿನ ವಿಸ್ತೀರ್ಣ ಎಷ್ಟು ಹಾಗೂ ಖಾಸಗಿ ಜಮೀನಿನ ವಿಸ್ತೀರ್ಣ ಎಷ್ಟು; ಪ್ರತಿ ಎಕರೆ/ಹೆಕ್ಟೇರ್‌ಗೆ ನಿಗಧಿಪಡಿಸಿದ ಪರಿಹಾರ ಧನ ಎಷ್ಟು ? (ಈ ಯೋಜನೆಯ ಸಂಪೂರ್ಣ ವಿವರ ನೀಡುವುದು)

## "ಪರಮಶಿವಯ್ಯ ಸಮಿತಿ ವರದಿ"

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೫ (೧೮೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ಬರ ಪೀಡಿತ ಜಿಲ್ಲೆಗಳಿಗೆ ನೀರು ಪೂರೈಸಲು ಪರಮಶಿವಯ್ಯ ಸಮಿತಿಯು ವರದಿ ಸಲ್ಲಿಸಿದೆ ;

(ಆ) ಇದಕ್ಕೆ ಸಂಬಂಧಿಸಿದಂತೆ ಯೋಜನಾ ವರದಿ ತಯಾರಿಸಲಾಗಿದೆಯೇ ;

(ಇ) ಈ ಕಾರ್ಯ ಯಾವ ಹಂತದಲ್ಲಿದೆ ?

## ಬ್ರಿಡ್ಜ್ ಕಂ ಬ್ಯಾರೇಜ್‌ಗಳ ವಿವರ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೬(೧೮೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಬ್ರಿಡ್ಜ್ ಕಂ ಬ್ಯಾರೇಜ್‌ಗಳು ಯಾವುವು ; (ವಿವರವಾರು ಪಟ್ಟಿ ನೀಡುವುದು)

(ಆ) ಇವುಗಳಲ್ಲಿ ದುರಸ್ಥಿಗೊಳಪಟ್ಟಿರುವ ಬ್ಯಾರೇಜ್‌ಗಳು ಯಾವುವು ; (ವಿವರ ನೀಡುವುದು) ;

(ಇ) ಆ ಪೈಕಿ ಎಷ್ಟು ಬ್ಯಾರೇಜ್‌ಗಳಿಗೆ ಗೇಟ್‌ಗಳನ್ನು ಅಳವಡಿಸಲಾಗಿದೆ ;

(ಈ) ಸದರಿ ಬ್ಯಾರೇಜ್‌ಗಳಲ್ಲಿ ಸಂಗ್ರಹಿಸಬಹುದಾದ ನೀರಿನ ಪ್ರಮಾಣ ಎಷ್ಟು ? (ಬ್ಯಾರೇಜ್‌ವಾರು ಸ್ಥಿತಿಗತಿಯ ಟಿಪ್ಪಣಿ ನೀಡುವುದು)

## ತುಂತುರು ನೀರಾವರಿ ಪದ್ಧತಿ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೭ (೧೮೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಸೂಕ್ಷ್ಮ ಹನಿ/ ತುಂತುರು ನೀರಾವರಿ ಪದ್ಧತಿಯನ್ನು ಅಳವಡಿಸುವ ಯೋಜನೆ ಸರ್ಕಾರದ ಮುಂದಿದೆ ; (ಈ ಯೋಜನೆಯ ವಿವರ ನೀಡುವುದು)

(ಆ) ಈ ಯೋಜನೆ ಯಾವ ಹಂತದಲ್ಲಿದೆ ?



## ವಿಜಯಪುರ ಸೈನಿಕ ಶಾಲೆಯ ಜಮೀನಿನ ಸರ್ವೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೧೩೮ (೧೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರದ ಸೈನಿಕ ಶಾಲೆಗೆ ಸರ್ಕಾರದಿಂದ ಎಷ್ಟು ವಿಸ್ತೀರ್ಣದ ಭೂಮಿಯನ್ನು ಯಾವ ರೀತಿ ಯಾವಾಗ ಕೊಡಲಾಗಿದೆ ;

(ಆ) ಈ ಜಮೀನಿನ ಗಡಿಗಳನ್ನು ಈ ಹಿಂದೆ ಯಾವಾಗ ಸರ್ವೆ ಮಾಡಲಾಗಿದೆ. ಸರ್ವೆ ಕಾರ್ಯ ಪೂರ್ಣಗೊಂಡಿದೆಯೇ ; ಇಲ್ಲದಿದ್ದರೆ, ಯಾವಾಗ ಪೂರ್ಣಗೊಳಿಸಲಾಗುವುದು ; ಸದರಿ ಶಾಲೆಯ ಜಮೀನನ್ನು ಅತಿಕ್ರಮಿಸಲಾಗಿದೆಯೇ ?

## ರಾಷ್ಟ್ರೀಯ ಕುಟುಂಬ ನೆರವು ಯೋಜನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೩೯ (೧೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಅಡಿಯಲ್ಲಿ ಕಳೆದ ೨ ವರ್ಷಗಳಲ್ಲಿ ಪರಿಹಾರ ಪಡೆದ ಕುಟುಂಬಗಳ ಸಂಖ್ಯೆ ಎಷ್ಟು; ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಪರಿಹಾರ ಪಡೆದ ಕುಟುಂಬಗಳ ಸಂಖ್ಯೆ ಎಷ್ಟು ;

(ಆ) ವಿತರಣೆಯಾದ ಪರಿಹಾರ ಮೊತ್ತವೆಷ್ಟು ; ಪರಿಹಾರ ವಿತರಣೆಗಾಗಿ ಸರ್ಕಾರದ ಮುಂದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಇ) ಪರಿಹಾರ ವಿತರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕುಡಿಯುವ ನೀರಿಗಾಗಿ ಕೆರೆಗಳ ದುರಸ್ತಿ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦ (೯೯೧) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ದುರಸ್ತಿಗೊಳಿಸಿದ ಕೆರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕೆರೆಗಳ ದುರಸ್ತಿಗೆ ಬಿಡುಗಡೆಯಾದ ಮೊತ್ತವೆಷ್ಟು ; (ಕೆರೆಗಳವಾರು ವಿವರ ನೀಡುವುದು)

(ಇ) ಪ್ರಸ್ತುತ ಕಾಮಗಾರಿಗಳು ಪೂರ್ಣಗೊಂಡಿದೆಯೇ ; ಇಲ್ಲದಿದ್ದಲ್ಲಿ, ಯಾವ ಹಂತದಲ್ಲಿದೆ ;

(ಈ) ಈ ಬಾರಿ ಬೇಸಿಗೆಯಲ್ಲಿ ನೀರು ಹರಿಸಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಹೊಸ ತಾಲ್ಲೂಕು ರಚನೆ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧ (೯೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ನೇಮಿಸಿದ ಸಮಿತಿಗಳು ಯಾವುವು ;



(ಆ) ಯಾವ ಸಮಿತಿ ಯಾವ ಯಾವ ಸ್ಥಳಗಳನ್ನು ತಾಲ್ಲೂಕು ಕೇಂದ್ರ ಮಾಡಲು ಶಿಫಾರಸ್ಸು ಮಾಡಿದೆ ; ಇದರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಹೊಸದಾಗಿ ತಾಲ್ಲೂಕು ಮಾಡಲು ಸಮಿತಿಯು ಶಿಫಾರಸ್ಸು ಮಾಡಿದೆಯೇ ;

(ಇ) ಸರ್ಕಾರ ಹೊಸ ತಾಲ್ಲೂಕುಗಳ ರಚನೆ ಯಾವಾಗ ಮಾಡಲು ನಿರ್ಧರಿಸಿದೆ ?

## ಕೆರೆಗಳ ಭೂಮಿ ಒತ್ತುವರಿ/ಕಬಳಿಕೆ.

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ) :–**

೧೪೨ (೯೯೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ, ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕೆರೆಗಳು ಎಷ್ಟು ; (ಪ್ರತಿ ಕೆರೆಗಳ ಹೆಸರು, ವಿಸ್ತೀರ್ಣ, ನೀರಿನ ಮೂಲಗಳ ವಿವರಗಳನ್ನೊದಗಿಸುವುದು)

(ಆ) ಇವುಗಳ ಪೈಕಿ, ಯಾವ್ಯಾವ ಕೆರೆಗಳು ಯಾವ್ಯಾವ ಇಲಾಖೆ/ಪ್ರಾಧಿಕಾರಗಳ ನಿರ್ವಹಣೆ/ನಿಯಂತ್ರಣಗಳಲ್ಲಿವೆ ;

(ಇ) ಇವುಗಳ ಪೈಕಿ, ಎಷ್ಟು ಕೆರೆಗಳು ಒತ್ತುವರಿಯಾಗಿವೆ/ಭೂ ಕಬಳಿಕೆಯಾಗಿವೆ ; (ಪ್ರತಿ ಕೆರೆಗಳ ಹೆಸರು, ಒತ್ತುವರಿದಾರರ ಹೆಸರು, ಒತ್ತುವರಿ/ಕಬಳಿಕೆಯ ವಿಸ್ತೀರ್ಣದ ವಿವರಗಳನ್ನೊದಗಿಸುವುದು)

(ಈ) ಒತ್ತುವರಿ/ಕಬಳಿಕೆ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿ ಒಳಗೆ ಒತ್ತುವರಿಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗುವುದು ;

(ಉ) ಈ ಕೆರೆ ಜಮೀನುಗಳ ಒತ್ತುವರಿದಾರರು/ಭೂ ಕಬಳಿಕೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರಗಳನ್ನೊದಗಿಸುವುದು)

## ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ.

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ) :–**

೧೪೩ (೧೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯ ಪ್ರದೇಶಗಳ ಒಳಭಾಗ ಗ್ರಾಮದ ದೂರ ಪ್ರದೇಶಗಳಲ್ಲಿರುವ 'ತಾಂಡ' 'ಕಾಲೋನಿ' ಇತ್ಯಾದಿ ಜನವಸತಿ ಪ್ರದೇಶಗಳನ್ನು ಗುರುತಿಸಲಾಗಿದೆಯೇ ; ಗುರುತಿಸಿದ್ದಲ್ಲಿ ಅಂತಹ ಎಷ್ಟು ತಾಂಡ/ಜನವಸತಿ ಪ್ರದೇಶಗಳು ರಾಜ್ಯದಲ್ಲಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ತಾಂಡ/ಜನವಸತಿ ಪ್ರದೇಶಗಳನ್ನು 'ಕಂದಾಯ ಗ್ರಾಮ'ಗಳೆಂದು ಘೋಷಣೆ ಮಾಡಲು ಇರುವ ತೊಡಕುಗಳೇನು ; ಆ ತೊಡಕುಗಳನ್ನು ನಿವಾರಣೆ ಮಾಡಿ, ಅಂತಹ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳೆಂದು ಸರ್ಕಾರ ಘೋಷಣೆ ಮಾಡುವುದೆ ;

(ಇ) ಕಂದಾಯ ಗ್ರಾಮಗಳೆಂದು ಘೋಷಣೆ ಮಾಡಲು ವಿಳಂಬವಾದರೆ, ಆ ಎಲ್ಲಾ ಜನವಸತಿ ಪ್ರದೇಶಗಳ ನಿವಾಸಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಸರ್ಕಾರ ತಕ್ಷಣ ಒದಗಿಸುವುದೇ ?



## ನೇಕಾರರಿಗೆ ನೀಡುತ್ತಿರುವ ಯಶಸ್ವಿನಿ ಯೋಜನೆಯಡಿ ಸಹಾಯಧನದಲ್ಲಿ ತಾರತಮ್ಯ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪ (೨೦೩) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಶಸ್ವಿನಿ ಯೋಜನೆಯಡಿ ನಗರ ಪ್ರದೇಶದ ನೇಕಾರರಿಗೆ ೭೫೦/–ರೂ. ಸಹಾಯಧನ ನೀಡುತ್ತಿದ್ದು, ಗ್ರಾಮೀಣ ಪ್ರದೇಶದ ನೇಕಾರರಿಗೆ ೨೫೦/–ರೂಪಾಯಿಗಳು ನೀಡುತ್ತಿರುವುದರಿಂದ ಗ್ರಾಮೀಣ ಭಾಗದ ನೇಕಾರರಿಗೆ ಅನ್ಯಾಯವಾಗುತ್ತಿರುವುದನ್ನು ನಿವಾರಿಸಲು ಕೈಗೊಳ್ಳುವ ಕ್ರಮಗಳೇನು ;

(ಆ) ರಾಜ್ಯದಲ್ಲಿ ಎಷ್ಟು ನೇಕಾರರಿಗೆ ಹೊಸ ಕಾಲೋನಿಗಳನ್ನು ನಿರ್ಮಿಸಲಾಗುತ್ತಿದೆ ; ಈಗಿರುವ ಕಾಲೋನಿಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ?

## ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ಕ್ರೀಡಾ ವಿದ್ಯಾರ್ಥಿಗಳ ಬಗ್ಗೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೪೫ (೨೦೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಲಾ–ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮತ್ತು ವಿಶ್ವ ಮಟ್ಟದಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಗಳಲ್ಲಿ, ಗ್ರೇಸ್ ಮಾರ್ಕ್ ನೀಡಲು ಕ್ರಮಕೈಗೊಂಡಿದೆಯೇ ;

(ಆ) ಶಾಲಾ–ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಹಾಜರಾತಿಯಲ್ಲಿ ರಿಯಾಯಿತಿ ನೀಡಲು ಯೋಜನೆ ರೂಪಿಸಿದೆಯೇ ; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಕ್ರೀಡೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರಗಳನ್ನು ಶಾಲಾ–ಕಾಲೇಜುಗಳಲ್ಲಿ ಒದಗಿಸಲು ಚಿಂತನೆ ನಡೆಸಲಾಗಿದೆಯೆ ;

(ಈ ) ರಾಜ್ಯ ಮಟ್ಟದಲ್ಲಿ ದೇಹಾದ್ದಾರ್ಢ್ಯ ಸ್ಪರ್ಧೆಯನ್ನು ಇಲಾಖೆ ವತಿಯಿಂದ ಸಂಘಟಿಸಲಾಗುತ್ತಿದೆಯೆ ; (ವಿವರ ನೀಡುವುದು)

(ಉ) ಕ್ರೀಡಾಳುಗಳಿಗೆ ಪ್ರೋತ್ಸಾಹಿಸಲು ಪ್ರತ್ಯೇಕವಾದ ಟ್ರೇನಿಂಗ್ ಸ್ಕೂಲ್ ಮತ್ತು ಕಾಲೇಜು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ? (ವಿವರ ನೀಡುವುದು)

## ಕರಾವಳಿ ಕರ್ನಾಟಕದ ಬಂದರು ಜಟ್ಟಿಗಳಿರುವ ಪ್ರದೇಶಗಳಲ್ಲಿ ಡ್ರಜ್ಜಿಂಗ್.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೪೬ (೨೦೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಕರ್ನಾಟಕದ ಬಂದರು ಜಟ್ಟಿಗಳಿರುವ ಪ್ರದೇಶಗಳಲ್ಲಿ ಡ್ರಜ್ಜಿಂಗ್ ಮಾಡದೇ ಮೀನುಗಾರಿಕಾ ದೋಣಿಗಳು ಅಪಘಾತಕ್ಕೀಡಾಗಿರುವ ಬಗ್ಗೆ ದಾಖಲಾದ ಕೇಸುಗಳೆಷ್ಟು ;

(ಆ) ಡ್ರಜ್ಜಿಂಗ್‌ಗಾಗಿ ೨೦೧೨–೧೩ರಿಂದ ಈವರೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಎಷ್ಟು ವೆಚ್ಚದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ ; (ವಿವರ ನೀಡುವುದು)



(ಇ) ಮಂಗಳೂರು ನಗರ ಪಾಲಿಕೆ ವ್ಯಾಪ್ತಿಯ ಬೆಂಗರೆ ಕಸಬಾ ಪ್ರದೇಶದಲ್ಲಿ ಪೆರಿ ಸರ್ವಿಸಸ್ ಭಾಗದಲ್ಲಿ ಡ್ರಜ್ಜಿಂಗ್ ಮಾಡದೇ ಬೆಂಗ್ರೆ ಪ್ರದೇಶದ ಜನರಿಗೆ ಜಟ್ಟಿಯ ಬಳಿ ದೋಣಿಗಳನ್ನು ಕೊಂಡೊಯ್ಯಲು ಆಗದೇ ವಿದ್ಯಾರ್ಥಿಗಳು, ಹಿರಿಯ ನಾಗರೀಕರು, ಗರ್ಭಿಣಿ ಸ್ತ್ರೀಯರಿಗೆ ತೊಂದರೆ ಆಗುತ್ತಿರುವುದಕ್ಕೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ;

(ಈ) ಡ್ರಜ್ಜಿಂಗ್ ಮಾಡದೇ ಉಂಟಾದ ಅಪಘಾತದಲ್ಲಿ ಪ್ರಾಣ ಕಳೆದುಕೊಂಡವರ ಮತ್ತು ನಷ್ಟ ಅನುಭವಿಸಿದವರಿಗೆ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು ? (ಕಳೆದ ಎರಡು ವರ್ಷಗಳ ವಿವರ ನೀಡುವುದು)

## ಕಟ್ಟಡ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವ ಯೋಜನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೪೭ (೨೦೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವ ಯೋಜನೆ ಪ್ರಾರಂಭಿಸಲಾಗಿದೆಯೇ ; ಇಲ್ಲದಿದ್ದರೆ, ಯಾವಾಗ ಕ್ರಮಕೈಗೊಳ್ಳುವುದು ; (ವಿವರ ನೀಡುವುದು)

(ಆ) ರಾಜ್ಯದ ಎಷ್ಟು ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ಕಛೇರಿಗಳು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಗೆ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿದೆ ;

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ ; ಕಾರ್ಮಿಕರಿಗೆ ನ್ಯಾಯವನ್ನು ಒದಗಿಸಿಕೊಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕ್ರಮಕೈಗೊಳ್ಳುವುದು ಯಾವಾಗ ;

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕ ಇಲಾಖೆಯಿಂದ ಮೆಡಿಕಲ್ ಕಾಲೇಜು ಸ್ಥಾಪನೆಗೆ ಕ್ರಮಕೈಗೊಳ್ಳುವುದೆ ;

(ಊ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ವಿವಿಧ ನೋಂದಾಯಿತ ವರ್ಗಗಳ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು ; ಸ್ವಾವಲಂಬನೆ ಯೋಜನೆಯನ್ವಯ ಎಷ್ಟು ಕಾರ್ಮಿಕರನ್ನು ಅನ್ವಯಿಸಲಾಗಿದೆ ; ಎಷ್ಟು ಅವಲಂಬಿತ ಕಾರ್ಮಿಕರಿಗೆ ಪರಿಹಾರ ಒದಗಿಸಲಾಗಿದೆ ? (ವಿವರ ನೀಡುವುದು)

## ಬೆಂಗ್ರೆ ಕಂದಾಯ ಗ್ರಾಮದಲ್ಲಿ ಕುಟುಂಬಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೪೮ (೨೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗ್ರೆ ಕಂದಾಯ ಗ್ರಾಮದಲ್ಲಿ ಸುಮಾರು ೭೫೦ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದ್ದು, ಕಳೆದ ೨೦ ವರ್ಷಗಳಿಂದ ಆರ್. ಟಿ.ಸಿ. (ಪಹಣಿ ಪತ್ರ) ನೀಡದೇ ಇರಲು ಕಾರಣಗಳೇನು ;

(ಆ) ಬೆಂಗ್ರೆ ಕಂದಾಯ ಗ್ರಾಮದಲ್ಲಿ ಸುಮಾರು ೩,೫೦೦ ಕುಟುಂಬಗಳು ಕಳೆದ ೨೦ ವರ್ಷಗಳಿಂದ ಖಾಯಂ ಆಗಿ ವಾಸಿಸುತ್ತಿದ್ದು, ಸದರಿ ಕುಟುಂಬಗಳಿಗೆ ಹಕ್ಕುಪತ್ರ (ಆರ್.ಟಿ.ಸಿ) ನೀಡದೇ ಸರ್ಕಾರದ ಯೋಜನೆಗಳು ಅನುಷ್ಠಾನಗೊಳ್ಳಲು ಅಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;



(ಇ) ಬೆಂಗ್ರೆ ಗ್ರಾಮದಲ್ಲಿ ವಾಸಿಸುತ್ತಿರುವ ಕುಟುಂಬಗಳು ಕಾರ್ಮಿಕ ವರ್ಗದವರಾಗಿದ್ದು ಸುಮಾರು ೭೦ಕ್ಕೂ ಹೆಚ್ಚು ಅಧಿಕ ಜನ ಬಿ.ಪಿ.ಎಲ್ ವರ್ಗದವರಾಗಿದ್ದು, ಸದರಿ ಗ್ರಾಮದಲ್ಲಿ ಗ್ರಾಮ ಲೆಕ್ಕಿಗರ ಕಛೇರಿ ಇಲ್ಲದೇ ಇರುವುದರಿಂದ ಗ್ರಾಮಸ್ಥರ ಬೇಡಿಕೆಯನ್ನು ಈಡೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಈ) ಬೆಂಗ್ರೆ ಗ್ರಾಮದಲ್ಲಿ ಸುಮಾರು ಹನ್ನೆರಡು ಸಾವಿರಕ್ಕಿಂತಲೂ ಅಧಿಕ ಯುವಕರಿದ್ದು ಸಾರ್ವಜನಿಕ ಉಪಯೋಗಕ್ಕೆ ಇದ್ದ ಸೂಪರ್ ಸ್ಟಾರ್ ಆಟದ ಮೈದಾನವನ್ನು ಖಾಸಗಿ ಕಂಪನಿಗೆ ನೀಡಿರುವುದನ್ನು ರದ್ದುಗೊಳಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಮಂಗಳೂರಿನಲ್ಲಿ ಆಧಾರ್ ಕಾರ್ಡ್ ನೋಂದಾವಣಿ ಕೇಂದ್ರಕ್ಕೆ ಸೌಕರ್ಯದ ಕೊರತೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ) :–**

೧೪೯ (೨೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರಿನಲ್ಲಿ ಆಧಾರ್ ಕಾರ್ಡ್ ನೋಂದಾವಣಿ ಕೇಂದ್ರವನ್ನು ನಗರ ಪಾಲಿಕೆಯ ೩ನೇ ಮಹಡಿಯಲ್ಲಿ ಸೌಕರ್ಯ ಇಲ್ಲದ ಕಟ್ಟಡದಲ್ಲಿ ನಿರ್ವಹಿಸಲು ಕಾರಣವೇನು ; ಹಿರಿಯ ನಾಗರೀಕರಿಗೆ, ಗರ್ಭಿಣಿ ಸ್ತ್ರೀಯರಿಗೆ ಮತ್ತು ವೃದ್ಧರಿಗೆ ೩ನೇ ಮಹಡಿಗೆ ಹೋಗಲು

ಅಸಾಧ್ಯವಾಗಿರುವುದರ ಬಗ್ಗೆ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಶಾಲಾ–ಕಾಲೇಜುಗಳಲ್ಲಿ ಆಧಾರ್ ಕಾರ್ಡ್ ನೋಂದಾವಣಿ ಮಾಡಲು ಸರ್ಕಾರ ಯೋಜನೆ ರೂಪಿಸಿದೆಯೇ ; ರೂಪಿಸಿದ್ದಲ್ಲಿ ಯಾವ ಯಾವ ಶಾಲಾ–ಕಾಲೇಜುಗಳಲ್ಲಿ ಆಧಾರ್ ಕಾರ್ಡ್ ನೋಂದಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ;

(ಇ) ಆಧಾರ್ ಕಾರ್ಡ್ ನೋಂದಾವಣಿ ಮಾಡಲು ಕೊನೆ ದಿನಾಂಕವನ್ನು ನಿಗದಿಪಡಿಸಲಾಗಿದೆಯೇ ;

(ಈ) ೨೦೧೩–೧೪ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಆಧಾರ್ ಕಾರ್ಡ್ ನೋಂದಾವಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ; (ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ತಾಲ್ಲೂಕು ಕೇಂದ್ರಗಳಲ್ಲಿ ಆಧಾರ್ ಕಾರ್ಡ್ ಕೇಂದ್ರ ಇಲ್ಲದಿರಲು ಕಾರಣವೇನು ; ಯಾವಾಗ ಸ್ಥಾಪಿಸಲಾಗುವುದು ? (ವಿವರ ನೀಡುವುದು)

## ಎತ್ತಿನ ಹೊಳೆ ಯೋಜನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೫೦ (೨೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಯಲುಸೀಮೆಯ ಜಿಲ್ಲೆಗಳ ಕೆರೆಗಳಿಗೆ ನೀರನ್ನು ತುಂಬಿಸಲು ಉದ್ದೇಶಿಸಿರುವ ಎತ್ತಿನಹೊಳೆ ಯೋಜನೆಯ ರೂಪುರೇಷೆಗಳೇನು ;



(ಆ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ;

(ಇ) ಈ ಯೋಜನೆಯ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ;

(ಈ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುವುದು ?

## ಸ್ಮಶಾನ ಭೂಮಿಯ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೫೧ (೨೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿರುವ ಸ್ಮಶಾನಗಳ ಸಂಖ್ಯೆ ಎಷ್ಟು ;

(ಆ) ಸ್ಮಶಾನಗಳಿಲ್ಲದೇ ಇರುವ ಜನ ವಸತಿಗಳೆಷ್ಟು ;

(ಇ) ಸ್ಮಶಾನಗಳಿದ್ದರೂ ವಿವಾದದಲ್ಲಿರುವ ಸ್ಮಶಾನಗಳು ಹಾಗೂ ಜನ ವಸತಿಗಳ ಸಂಖ್ಯೆ ಎಷ್ಟು ;

(ಈ) ಈ ವಿವಾದವನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಕ್ತಚಂದನ ಮರಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೫೨ (೨೧೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ರಕ್ತಚಂದನ ಮರಗಳನ್ನು ಬೆಳೆಯುತ್ತಿರುವ ಪ್ರದೇಶಗಳು ಯಾವುವು ; ಎಷ್ಟು ಪ್ರಮಾಣದಲ್ಲಿ ರಕ್ತ ಚಂದನ ಮರಗಳನ್ನು ಬೆಳೆಸಲಾಗುತ್ತಿದೆ ;

(ಆ) ರಕ್ತ ಚಂದನ ಮರದ ಪ್ರತಿ ಟನ್‌ಗೆ ಮಾರುಕಟ್ಟೆ ಬೆಲೆ ಎಷ್ಟು ;

(ಇ) ರಕ್ತ ಚಂದನ ಮರಗಳನ್ನು ಅಕ್ರಮ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಅಕ್ರಮ ಸಾಗಾಣಿಕೆ ಹಾಗೂ ವಿಲೇವಾರಿ ಮಾಡುವವರ ವಿರುದ್ಧ ಸರ್ಕಾರ ದಾಖಲಿಸಿಕೊಂಡಿರುವ ಪ್ರಕರಣಗಳೆಷ್ಟು? (ಶಾಮೀಲು ಆಗಿರುವ ಅಧಿಕಾರಿಗಳ ಹೆಸರನ್ನು ನೀಡುವುದು)

## ಯುವಜನ ಸೇವಾ ಆಯೋಗದ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೧೫೩೩ (೨೧೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಯುವಜನ ಸೇವಾ ಆಯೋಗದ ಇಲಾಖೆಗೆ ಮೀಸಲಿಟ್ಟಿರುವ ಅನುದಾನವೆಷ್ಟು ;

(ಆ) ಈ ಅನುದಾನದಿಂದ ಯುವಜನ ಸಬಲೀಕರಣ ಸಾಧ್ಯವೇ ;

(ಇ) ಯುವಜನ ಸಬಲೀಕರಣಕ್ಕೆ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು ? (ಯೋಜನವಾರು ವಿವರ ನೀಡುವುದು)



## ಹಾವೇರಿ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಾಣ ಮಾಡಿದ್ದ ಕಾಮಗಾರಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೫೩೪ (೨೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದವರಿಂದ ಕೈಗೊಂಡ ಕಾಮಗಾರಿಗಳಾವುವು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಹಾವೇರಿ ಜಿಲ್ಲೆಯ ಯಾವ ಯಾವ ಗ್ರಾಮದಲ್ಲಿ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ಒದಗಿಸುವುದು)

(ಇ) ನಿಗಧಿತ ಅವಧಿಯೊಳಗಾಗಿ ಕಾಮಗಾರಿಗಳು ಪೂರ್ಣಗೊಂಡಿದೆಯೇ ; (ತಾಲ್ಲೂಕುವಾರು, ಗ್ರಾಮವಾರು ಮಾಹಿತಿ ಒದಗಿಸುವುದು)

(ಈ) ಕಳಪೆ ಗುಣಮಟ್ಟದ ಕಾಮಗಾರಿಗಳು ಕಂಡುಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ಈ ನಿರ್ಮಿತಿ ಕೇಂದ್ರದ ಕಾರ್ಯವನ್ನು ಯಾರು ನಿರ್ವಹಣೆ ಮಾಡುತ್ತಾರೆ ; ಹಾಗೂ ಸದರಿ ಕಾಮಗಾರಿಗಳು ಯಾರಿಗೆ ವಹಿಸಲಾಗಿದೆ ? (ಸಂಪೂರ್ಣವಾಗಿ ಮಾಹಿತಿ ಒದಗಿಸುವುದು)

## ಸಂಘ ಸಂಸ್ಥೆಗಳಿಗೆ ಸರ್ಕಾರ ಮಂಜೂರು ಮಾಡಿರುವ ಜಮೀನಿನ ವಿವರ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೫೫ (೨೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿವಿಧ ಸಂಘ ಸಂಸ್ಥೆಗಳಿಗೆ, ಮಠಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸರ್ಕಾರ ಗುತ್ತಿಗೆ ಆಧಾರ ಮತ್ತು ರಿಯಾಯಿತಿ ದರದಲ್ಲಿ ಕ್ರಯಪತ್ರದ ಮೂಲಕ (Outright Sale) ಸರ್ಕಾರಿ ಜಮೀನನ್ನು ಮಂಜೂರು ಮಾಡಿರುವುದು ನಿಜವೇ ;

(ಆ) ನಿಜವಾಗಿದ್ದರೆ, ಅಂತಹ ಸಂಸ್ಥೆಗಳ ಹೆಸರು, ಜಮೀನಿನ ವಿಸ್ತೀರ್ಣ, ಸರ್ಕಾರ ನಿಗದಿ ಮಾಡಿದ ದರ ಮತ್ತು ಮಂಜೂರು ಮಾಡಿದ ಷರತ್ತುಗಳ ಕಳೆದ ಮೂರು ವರ್ಷಗಳ ವಿವರ ಒದಗಿಸುವುದು ;

(ಇ) ಮಂಜೂರಾದ ಗುತ್ತಿಗೆ ದರ ಅಥವಾ ರಿಯಾಯಿತಿ ಮಾರಾಟ ಮಾಡಿದ ದರ ಎಷ್ಟು ? (ಕಳೆದ ಮೂರು ವರ್ಷಗಳ ವಿವರಗಳನ್ನು ಒದಗಿಸುವುದು)

## ಸಾಮಾಜಿಕ ಭದ್ರತೆ ಯೋಜನೆಗಳ ವಿವರ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೫೬ (೨೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಸಾಮಾಜಿಕ ಭದ್ರತೆ ಯೋಜನೆಗಳಡಿ ಜಾರಿ ಮಾಡಿರುವ ಜನಪ್ರಿಯ ಕಾರ್ಯಕ್ರಮಗಳು ಯಾವುವು ;



(ಆ) ಪ್ರತಿ ಯೋಜನೆಗಳ ಮೂಲಕ ೨೦೧೧–೧೨ ರಿಂದ ೨೦೧೪–೧೫ನೇ ಸಾಲಿನವರೆಗೆ ಪ್ರಯೋಜನ ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ; ಖರ್ಚಾಗಿರುವ ಹಣ ಎಷ್ಟು ? (ಕಳೆದ ಮೂರು ವರ್ಷಗಳ ಪೂರ್ಣ ವಿವರ ಒದಗಿಸುವುದು)

## ಬಾಗಲಕೋಟೆ ಜಿಲ್ಲೆಯ ಶಿವಯೋಗ ಮಂದಿರದ ಕೆರೆಯನ್ನು ವಿಸ್ತಾರಗೊಳಿಸಿ ನೀರು ನಿಲ್ಲುವಂತೆ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೫೭ (೨೨೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ನಿರ್ಮಿಸಲಾಗಿರುವ ಚಿಕ್ಕ ಕೆರೆಯನ್ನು ವಿಸ್ತರಿಸಿ ಗುಡ್ಡದ ನೀರು ಕೆರೆಗೆ ಬಂದು ನಿಲ್ಲುವಂತೆ ಮಾಡಲು ಕ್ರಮಕೈಗೊಳ್ಳಲಾಗುವುದೇ ;

(ಆ) ಸದರಿ ಕೆರೆಯ ನೀರು ಕಲುಷಿತಗೊಂಡಿದ್ದು ಕುಡಿಯಲು ಯೋಗ್ಯವಿಲ್ಲದ ಕಾರಣ ಕೆರೆಯ ಸುತ್ತಲೂ ತಂತಿಬೇಲಿ ಹಾಕಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಹಾಗಿದ್ದಲ್ಲಿ, ಈ ಕೆಲಸ ತೆಗೆದುಕೊಳ್ಳಲು ಐವತ್ತು ಲಕ್ಷ ರೂ.ಗಳನ್ನು ಸರ್ಕಾರದವರು ಕಾರ್ಯಕಾರಿ ಅಭಿಯಂತರರು ಸಣ್ಣ ನೀರಾವರಿ ಇಲಾಖೆ ಬಾಗಲಕೋಟೆ ಇವರಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಕೆರೆಯಿಂದ ಕೆರೆಗೆ ನೀರು ತೋಡಿಸುವ ಯೋಜನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೫೮ (೨೨೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ವರ್ಷದ ಆಯವ್ಯಯದಲ್ಲಿ ಕೆರೆಯಿಂದ ಕೆರೆಗೆ ನೀರು ತೋಡಿಸುವ ಯೋಜನೆಯನ್ನು ಘೋಷಿಸಿದ್ದು, ಅದರಂತೆ, ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕ ನೀರಾವರಿ ಇಲಾಖೆಯ ಹಿರೇಕೊಪ್ಪ ಕೆರೆಗೆ ಹಿರೇಬೂದನೂರ ಕೆರೆಯಿಂದ ನೀರು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಒಂದು ವೇಳೆ ಹಿರೇಬೂದನೂರು ಕೆರೆಯಿಂದ ನೀರು ಒದಗಿಸಲು ಸಾಧ್ಯವಾಗದೇ ಇದ್ದಲ್ಲಿ ಅಲ್ಲಿಯೇ ಸಮೀಪ ಹಾಯ್ದು ಹೋಗಿರುವ ಮಾರ್ಕಂಡೇಯ ನದಿ ನೀರಿನಿಂದ ಅಥವಾ ಬಳ್ಳಾರಿ ನಾಲಾದಿಂದ ನೀರು ಬಿಡಲು ಪರಿಶೀಲಿಸಲಾಗುವುದೇ ;

(ಇ) ಈ ನಿಟ್ಟಿನಲ್ಲಿ ಸರ್ವೆ ಕಾರ್ಯವನ್ನು ಕೂಡಲೇ ಕೈಗೆತ್ತಿಕೊಳ್ಳಲಾಗುವುದೇ ?

## ಶಿವಯೋಗಮಂದಿರದ ಆಧುನೀಕರಣದ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೫೯ (೨೨೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಶಿವಯೋಗಮಂದಿರದಲ್ಲಿ ಹೊನಲು–ಬೆಳಕು ಯೋಜನೆ ಗಾರ್ಡನ್ ಮತ್ತು ಗಾಜಿನ ಮನೆ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;



(ಆ) ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಇ) ಇದಕ್ಕೆ ಎಷ್ಟು ಹಣ ತಗಲುವುದೆಂದು ಅಂದಾಜಿಸಲಾಗಿದೆ ; ಒದಗಿಸಲಾಗಿರುವ ಮೊತ್ತ ಎಷ್ಟು ? (ಕಾಮಗಾರಿವಾರು ವಿವರ ನೀಡುವುದು)

## ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಹಾಗೂ ಕಿತ್ತೂರನ್ನು ಪೂರ್ಣ ಪ್ರಮಾಣದ ತಾಲ್ಲೂಕಾಗಿ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೧೬೦ (೨೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಅದು ಯಾವ ಹಂತದಲ್ಲಿದೆ ;

(ಆ) ಈ ಹಿಂದೆ ಸರ್ಕಾರದವರು ಹೊಸ ತಾಲ್ಲೂಕುಗಳ ರಚನೆ ಕುರಿತು ಯಾವ–ಯಾವ ಸಮಿತಿಗಳನ್ನು ನೇಮಿಸಿದ್ದರು ;

(ಇ) ಬೆಳಗಾವಿ ಜಿಲ್ಲೆಯಲ್ಲಿ ಯಾವ ಯಾವ ಸಮಿತಿಯವರು ಯಾವ ಯಾವ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ಮಾಡಬೇಕು ಎಂದು ಶಿಫಾರಸ್ಸು ಮಾಡಿರುವರು ; (ಸಮಿತಿವಾರು ವಿವರ ನೀಡುವುದು)

(ಈ) ಒಂದು ಪೂರ್ಣ ಪ್ರಮಾಣದ ತಾಲ್ಲೂಕು ರಚನೆಯಾದಲ್ಲಿ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳುವುದು ;

(ಉ) ಬೆಳಗಾವಿ ಜಿಲ್ಲೆ ಕಿತ್ತೂರು ಇನ್ನೂ ಪೂರ್ಣ ಪ್ರಮಾಣದ ತಾಲ್ಲೂಕು ಆಗಿ ಕೆಲಸ ಮಾಡದೇ ಇರುವ ಸಂಗತಿ ನಿಜವೇ ;

(ಊ) ಹಾಗಿದ್ದಲ್ಲಿ, ಪೂರ್ಣ ಪ್ರಮಾಣದ ತಾಲ್ಲೂಕನ್ನಾಗಿ ಮಾಡಲು ಕೂಡಲೇ ಸರ್ಕಾರಿ ಆದೇಶ ಹೊರಡಿಸುವುದೇ ?

## ಬೆಂಗಳೂರು ನಗರದಲ್ಲಿ ಒತ್ತುವರಿ ಆಗಿರುವ ಜಮೀನಿನ ಬಗ್ಗೆ

**ಶ್ರೀಮತಿ ನಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೧ (೨೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಮಸ್ವಾಮಿ ಆಯೋಗದ ವರದಿ ಅನ್ವಯ ಬೆಂಗಳೂರು ನಗರದಲ್ಲಿ ಒತ್ತುವರಿಯಾಗಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಎಕರೆಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ; (ಒತ್ತುವರಿದಾರರ ಪೂರ್ಣ ವಿಳಾಸ ಪ್ರದೇಶವಾರು ಮಾಹಿತಿ ಒದಗಿಸುವುದು)

(ಇ) ಇನ್ನೂ ಉಳಿದ ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಸಂಘ ಸಂಸ್ಥೆಗಳಿಗೆ ಭೂಮಿ ನೀಡಿರುವ ಬಗ್ಗೆ

**ಶ್ರೀಮತಿ ನಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೨ (೨೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಎಷ್ಟು ಸಂಘ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕ ಹಿತಾಸಕ್ತಿಗಾಗಿ ಸರ್ಕಾರ ಜಮೀನನ್ನು ಮಂಜೂರು ಮಾಡಿದೆ ; (ಸಂಘ ಸಂಸ್ಥೆವಾರು, ಜಿಲ್ಲಾವಾರು ಮಾಹಿತಿ ನೀಡುವುದು)



(ಆ) ಈ ರೀತಿ ಸರ್ಕಾರಿ ಜಮೀನನ್ನು ಮಂಜೂರು ಮಾಡಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು ;

(ಇ) ಭೋಗಸ್ ಸಂಸ್ಥೆ ಹೆಸರಿನಲ್ಲಿ ಸರ್ಕಾರಿ ಜಮೀನು ಮಂಜೂರು ಮಾಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಅಂತಹ ಜಮೀನನ್ನು ಹಿಂಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಕೆರೆಗಳ ಜೀರ್ಣೋದ್ಧಾರದ ಬಗ್ಗೆ

**ಶ್ರೀಮತಿ ನಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೩ (೨೩೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು ;

(ಆ) ಈ ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಲಾಗಿದೆಯೇ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಉಪಯೋಗವಾಗದಿದ್ದಲ್ಲಿ ಸಂಬಂಧಪಟ್ಟ ಎಷ್ಟು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ ? (ವಿವರ ನೀಡುವುದು)

## ನಿರುದ್ಯೋಗಿಗಳಿಗೆ ಉದ್ಯೋಗವಕಾಶ ಕಲ್ಪಿಸುವ ಬಗ್ಗೆ

**ಶ್ರೀಮತಿ ನಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೪ (೨೨೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಉದ್ಯೋಗ ಮತ್ತು ತರಬೇತಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಉದ್ಯೋಗ ಮತ್ತು ತರಬೇತಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿರುವ ಎಷ್ಟು ನಿರುದ್ಯೋಗಿ ಅಭ್ಯರ್ಥಿಗಳಿಗೆ ಸರ್ಕಾರಿ/ಖಾಸಗಿ ಉದ್ಯೋಗ ನೀಡಲಾಗಿದೆ ;

(ಇ) ಉದ್ಯೋಗ ಮತ್ತು ತರಬೇತಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿ ವಯೋಮಿತಿ ಮೀರಿದ್ದರೂ ಸಹ ಇದುವರೆವಿಗೂ ಉದ್ಯೋಗ ದೊರೆಯದೆ ಕಳೆದ ಒಂದು ವರ್ಷದಲ್ಲಿ ಲ್ಯಾಪ್ಸ್ ಆಗಿರುವ ಪ್ರಕರಣಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ವಿದ್ಯಾವಂತ ಯುವಕ–ಯುವತಿಯರು ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಸರ್ಕಾರಿ ನೌಕರಿ ಸಿಗುವುದಿಲ್ಲ ಎಂದು ಸಂಪೂರ್ಣವಾಗಿ ಭಾವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದರೆ, ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳಿಂದಲೇ ಗ್ರೂಪ್–ಡಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವುದಾದರೂ ಯೋಜನೆ ರೂಪಿಸಿದೆಯೇ ? (ವಿವರ ನೀಡುವುದು)



## ಆನೆಗಳ ದಾಳಿಯಿಂದ ಸಾವಿಗೀಡಾದ ರೈತರ ಪರಿಹಾರದ ಬಗ್ಗೆ

**ಶ್ರೀಮತಿ ನಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೬೫ (೨೨೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಆನೆಗಳ ದಾಳಿಯಿಂದ ಸಾವಿಗೀಡಾದ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ರೀತಿ ಮೃತಪಟ್ಟ ರೈತರ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರದ ಮೊತ್ತ ಎಷ್ಟು ;

(ಇ) ಆನೆ ದಾಳಿ ನಿಯಂತ್ರಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕಾಡು ಪ್ರಾಣಿಗಳಿಂದ ಪ್ರಾಣ ಹಾನಿ, ಬೆಳೆಹಾನಿ ಆಗುತ್ತಿರುವುದು ಸರ್ಕಾರ ಗಮನಿಸಿದೆಯೇ ;

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ರೈತರ ನೆರವಿಗೆ ಹಮ್ಮಿಕೊಂಡ ಕಾರ್ಯಕ್ರಮಗಳೇನು ?

## ನಾಲಾ ಆಧುನೀಕರಣ/ದುರಸ್ಥಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೬೬ (೨೩೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳಲ್ಲಿ ಹರಿಯುವ ವಿಶ್ವೇಶ್ವರಯ್ಯ ನಾಲೆ ಹಾಗೂ ಚನ್ನಯ್ಯ ಹೆಬ್ಬಳ್ಳ

ನಾಲೆಗಳಿಗೆ ಸಂಬಂಧಿಸಿದಂತೆ ಎಷ್ಟು ಕಿ.ಮೀ. ವಿಸ್ತೀರ್ಣದ ನಾಲೆಗಳನ್ನು ಆಧುನೀಕರಣ/ದುರಸ್ಥಿಗೊಳಿಸಲು ಯೋಜನೆ ರೂಪಿಸಲಾಗಿದೆ (ಪೂರ್ಣ ವಿವರಗಳೊಡನೆ) ; ಹಾಗೂ ಇದರ ಅಂದಾಜು ಮೊತ್ತವೆಷ್ಟು ;

(ಆ) ಯಾವ ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ;

(ಇ) ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನಲ್ಲಿ ಹರಿಯುವ ಮಾಧವ ಮಂತ್ರಿ ನಾಲೆಗೆ ಸಂಬಂಧಿಸಿದಂತೆ ಎಷ್ಟು ಕಿ.ಮೀ. ವಿಸ್ತೀರ್ಣ ನಾಲೆಯನ್ನು ಆಧುನೀಕರಣ/ದುರಸ್ಥಿಗೊಳಿಸಲು ಯೋಜನೆ ರೂಪಿಸಲಾಗಿದೆ ; ಸದರಿ ಯೋಜನೆಯ ಅಂದಾಜು ಮೊತ್ತವೆಷ್ಟು ;

(ಈ) ಯಾವ ಕಾಲಮಿತಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ?

## ಖಾಸಗಿ ಅನುದಾನಿತ ಐ.ಟಿ.ಐ. ನೌಕರರಿಗೆ ಸವಲತ್ತು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೬೭ (೨೩೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಅನುದಾನಿತ ಐ.ಟಿ.ಐ. ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ (ಶೇಕಡ ೧೦೦ರಷ್ಟು ಅನುದಾನ ಪಡೆಯುತ್ತಿರುವ) ಥಾಮಸ್ ವರದಿಯ ಪ್ರಕಾರ ವಾರ್ಷಿಕ ವೇತನ ಬಡ್ತಿ, ನಿವೃತ್ತಿ ಪಿಂಚಣಿ, ರಜೆ ಇನ್ನಿತರೆ ಸವಲತ್ತುಗಳನ್ನು ಎಷ್ಟು ನೌಕರರಿಗೆ ನೀಡಬೇಕಾಗಿದೆ ;

(ಆ) ಯಾವ ಕಾಲಮಿತಿಯಲ್ಲಿ ಸದರಿ ಸವಲತ್ತುಗಳನ್ನು ನೀಡಲಾಗುವುದು ?



## ಹೈದರಾಬಾದ್ ಕರ್ನಾಟಕ ಕಾರ್ಮಿಕ ಮಂಡಳಿಗಳ ಸವಲತ್ತುಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೮ (೨೩೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ವಿವಿಧ ಕಾರ್ಮಿಕ ಮಂಡಳಿಗಳ ಸವಲತ್ತುಗಳ ಬಗ್ಗೆ ಪ್ರಚಾರ ಇಲ್ಲದಿರುವುದು ಮತ್ತು ಕಾರ್ಮಿಕರ ನೋಂದಣಿ ಗರಿಷ್ಠ ಪ್ರಮಾಣದಲ್ಲಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಅಥವಾ ಬಾರದಿದ್ದಲ್ಲಿ, ಕಾರ್ಮಿಕ ಸವಲತ್ತುಗಳ ಬಗ್ಗೆ ಜಾಗೃತಿ ಉಂಟು ಮಾಡುವ ಮತ್ತು ನೋಂದಣಿ ಮಾಡುವ ಕಾರ್ಯಗಳನ್ನು ಸರ್ಕಾರ ಮಾಡುವುದೇ ?

## ಹೈದರಾಬಾದ್ ಕರ್ನಾಟಕ ನೀರಾವರಿ ಯೋಜನೆಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೬೯ (೨೩೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಣ್ಣೆತೋರಾ ಯೋಜನೆಯನ್ನು ಒಳಗೊಂಡಂತೆ ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಯಾವ ಯಾವ ನೀರಾವರಿ ಯೋಜನೆಗಳಿವೆ ; (ಯೋಜನಾವಾರು ಪ್ರಗತಿಯ ಹಂತವನ್ನು ತಿಳಿಸುವುದು)

(ಆ) ಪ್ರತಿ ಯೋಜನೆಯಿಂದ ಎಷ್ಟು ಹೆಕ್ಟೇರ್ ಭೂಮಿಗೆ ನೀರು ಒದಗಲಿದೆ ? (ವಿವರ ನೀಡುವುದು)

## ಚಿಕ್ಕಮಗಳೂರು ಜಿಲ್ಲೆಯ ಕಡೂರು–ಬೀರೂರು ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೭೦ (೨೪೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯ, ಕಡೂರು–ಬೀರೂರು ಪಟ್ಟಣಗಳಿಗೆ ಕುಡಿಯುವ ನೀರಿನ ಕಾಮಗಾರಿಯು ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಯೋಜನೆಗೆ ಮಂಜೂರಾತಿ ನೀಡಲಾಗಿದ್ದು ಯಾವಾಗ ; ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

(ಇ) ಸರ್ಕಾರ ಈ ಯೋಜನೆಗೆ ನೀಡಿರುವ ಅನುದಾನವೆಷ್ಟು ?

## ರಾಜ್ಯದಲ್ಲಿ ಅತಿಕ್ರಮವಾಗಿರುವ ಗೋಮಾಳಗಳನ್ನು ತೆರವುಗೊಳಿಸುವ ಬಗ್ಗೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೭೧ (೨೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೋಮಾಳಗಳನ್ನು ಮೀಸಲಿಡಲು ಕಾರಣಗಳೇನು ; ಜಿಲ್ಲಾವಾರು ಗೋಮಾಳಗಳ ವಿವರ ನೀಡುವುದು ;

(ಆ) ಗೋಮಾಳಗಳ ಜಾಗವು ಅತಿಕ್ರಮವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಅತಿಕ್ರಮವಾಗಿರುವ ಗೋಮಾಳಗಳ ಕುರಿತು ಜಿಲ್ಲಾವಾರು ವಿವರ ನೀಡುವುದು)

(ಇ) ಈ ಅತಿಕ್ರಮವನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;



(ಈ) ತೆರವುಗೊಳಿಸಿರುವ ಗೋಮಾಳಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ರಾಜ್ಯದಲ್ಲಿ ಐ.ಟಿ.ಐ. ಕಾಲೇಜು ಸಂಸ್ಥೆಗಳಲ್ಲಿ ಅನುಸರಿಸುತ್ತಿರುವ ಪಠ್ಯಕ್ರಮ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೧೭೨ (೨೩೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಐ.ಟಿ.ಐ. ಕಾಲೇಜು ಸಂಸ್ಥೆಗಳಲ್ಲಿ ಯಾವ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ ; (NCVT/SCVT) ;

(ಆ) ರಾಜ್ಯದಲ್ಲಿ SCVT ಪಠ್ಯಕ್ರಮವನ್ನು ಎಂದಿನಿಂದ ಹಾಗೂ ಎಷ್ಟು ಸಂಸ್ಥೆಗಳಲ್ಲಿ ಪ್ರಾರಂಭಿಸಲಾಗಿದೆ ;

(ಇ) SCVT ಪಠ್ಯಕ್ರಮ ಅನುಸರಿಸಿ ತೇರ್ಗಡೆಯಾಗಿ ಹೊರಬಂದ ವಿದ್ಯಾರ್ಥಿಗಳಿಗೆ ದೇಶ ಮತ್ತು ವಿದೇಶಗಳಲ್ಲಿ ಉದ್ಯೋಗಕ್ಕೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಅರಣ್ಯ ಇಲಾಖೆಯಲ್ಲಿ ಅನುಷ್ಠಾನಗೊಳಿಸಲು ಹಮ್ಮಿಕೊಂಡಿರುವ ಯೋಜನೆಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೩ (೨೪೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಅರಣ್ಯ ಇಲಾಖೆಯು ಹಮ್ಮಿಕೊಂಡಿರುವ ಯೋಜನೆಗಳಾವುವು ; (ಯೋಜನಾವಾರು ವಿವರ ನೀಡುವುದು)

(ಆ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ೦೩ ವರ್ಷಗಳಿಂದ ಈ ಯೋಜನೆಗಳಿಗಾಗಿ ಖರ್ಚು ಮಾಡಿದ ಮೊತ್ತವೆಷ್ಟು ;

(ಇ) ಈ ಯೋಜನೆಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ? (ವಿವಿಧ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ನೀಡುವುದು)

## ಭೂ ಹಿಡುವಳಿ ಹೊಂದಿರುವ ರೈತ ಕುಟುಂಬಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೪ (೨೪೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಭೂ ಹಿಡುವಳಿ ಹೊಂದಿರುವ ರೈತ ಕುಟುಂಬಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ದೊಡ್ಡ ಹಾಗೂ ಸಣ್ಣ ಪ್ರಮಾಣದಲ್ಲಿ ಭೂ ಹಿಡುವಳಿ ಹೊಂದಿರುವ ರೈತ ಕುಟುಂಬಗಳ ಸಂಖ್ಯೆ ಎಷ್ಟು ;

(ಇ) ಭೂ ಹಿಡುವಳಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತ ಕುಟುಂಬಗಳ ಸಂಖ್ಯೆ ಎಷ್ಟು ?

## ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಅನುಕಂಪದ ಆಧಾರದಲ್ಲಿ ನೇಮಕಾತಿ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೫ (೨೪೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಮೈಸೂರು ಹಾಗೂ ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ ಅನುಕಂಪ



ಆಧಾರದ ಮೇಲಿನ ನೇಮಕಾತಿಯ ಎಷ್ಟು ಪ್ರಕರಣಗಳು ಬಾಕಿ ಇವೆ ;

(ಆ) ಅನುಕಂಪ ಆಧಾರದಲ್ಲಿ ಕಳೆದ ೩ ವರ್ಷಗಳಿಂದ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ; ಆ ಪೈಕಿ ಎಷ್ಟು ಜನರನ್ನು ನೇಮಕ ಮಾಡಲಾಗಿದೆ ;

(ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳ ಸಂಖ್ಯೆ ಎಷ್ಟು ; ಬಾಕಿ ಉಳಿದಿರುವ ಅರ್ಜಿಯನ್ನು ಯಾವಾಗ ವಿಲೇವಾರಿ ಮಾಡಲಾಗುವುದು ?

## ನಗರಗಳ ಹಸಿರೀಕರಣ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೬ (೨೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ರಸ್ತೆಬದಿ ನೆಡುತೋಪುಗಳನ್ನು ಹೆಚ್ಚಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ನಗರಗಳನ್ನು ಹಸಿರೀಕರಣಗೊಳಿಸುವ ಬಗ್ಗೆ ಸರ್ಕಾರವು ಕೈಗೊಳ್ಳುವ ಕ್ರಮಗಳೇನು ;

(ಇ) ಸಮೃದ್ಧ ಹಸಿರು ಗ್ರಾಮ ಯೋಜನೆಯನ್ನು ಸದರಿ ಜಿಲ್ಲೆಗಳಲ್ಲಿನ ಎಷ್ಟು ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದೆ ? (ವಿವರಗಳನ್ನು ನೀಡುವುದು)

## ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭ (೨೪೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಭಿವೃದ್ಧಿ ವಂಚಿತ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗಳ ವಿವರಗಳನ್ನು ನೀಡುವುದು ;

(ಇ) ಧಾರವಾಡ, ಹಾವೇರಿ, ಗದಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಯಾವಾಗ ಸ್ಥಾಪಿಸಲಾಗುವುದು ?

## ಬಾಲಕಾರ್ಮಿಕರ ಪುನರ್‌ವಸತಿ

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮ (೨೪೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಲಕಾರ್ಮಿಕರ ಭವಿಷ್ಯದೊಂದಿಗೆ ಉದ್ಯಮಿಗಳು ಇಂದಿಗೂ ಚೆಲ್ಲಾಟವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟಿ ತಪ್ಪಿತಸ್ಥರನ್ನು ಕಾನೂನು ರೀತ್ಯಾ ಶಿಕ್ಷೆಗೆ ಗುರಿಪಡಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಬಾಲಕಾರ್ಮಿಕರ ಪುನರ್‌ವಸತಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಾವುವು ?



## ಹೂಳು ಪ್ರಾಧಿಕಾರ ಸ್ಥಾಪನೆ ಕುರಿತು

**ಡಾ॥ ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೯ (೨೪೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿನ ಜಲಾಶಯಗಳಲ್ಲಿ ಹೂಳು ತುಂಬಿಹೋಗಿದ್ದು, ನೀರಿನ ಸಂಗ್ರಹ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಹೂಳು ತೆಗೆಯಲು ಕೈಗೊಂಡಿರುವ ಕ್ರಮಗಳೇನು, ಯಾವ ಯಾವ ಜಲಾಶಯಗಳಿಂದ ಹೂಳು ತೆಗೆಯಲಾಗಿದೆ, ಇದಕ್ಕಾಗಿ ತಗಲಿದ ವೆಚ್ಚವೆಷ್ಟು ; (ವಿವರಗಳನ್ನು ಒದಗಿಸುವುದು)

(ಇ) ನಿಯತಕಾಲಿಕವಾಗಿ ಹೂಳು ಎತ್ತುವ ಕಾರ್ಯಕ್ರಮಗಳನ್ನು ರೂಪಿಸಲು ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲಾಗುವುದೇ ;

(ಈ) ರೈತರ ಸಹಭಾಗಿತ್ವದಲ್ಲಿ ಹೂಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೇ ?

## ಕೊಪ್ಪಳ ಜಿಲ್ಲೆ ಕೆರೆಗಳ ಅಭಿವೃದ್ಧಿಗೆ ಮಂಜೂರಾದ ಅನುದಾನ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೦ (೧೯೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಕಳೆದ ೨ ವರ್ಷಗಳಿಂದ ಕೆರೆಗಳ ಅಭಿವೃದ್ಧಿಗೆ ಖರ್ಚು ಮಾಡಿರುವ ಅನುದಾನ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕೈಗೊಂಡ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ; (ವಿವರ ನೀಡುವುದು)

(ಇ) ಕೆರೆಗಳ ಕಾಮಗಾರಿಗಳನ್ನು ಇಲಾಖೆಯೆ ನಿರ್ವಹಿಸುತ್ತಿದೆಯೇ ಅಥವಾ ಬೇರೆಯವರಿಗೆ ಗುತ್ತಿಗೆ ನೀಡಿ ಕೆಲಸ ನಿರ್ವಹಿಸುತ್ತಿದೆ ; ಸದ್ಯ ಯಾವ ಯಾವ ಗುತ್ತಿಗೆದಾರರು ಕೆಲಸ ನಿರ್ವಹಿಸುತ್ತಿದ್ದಾರೆ ? (ಪೂರ್ಣ ವಿವರ ನೀಡುವುದು)

## ಕೊಪ್ಪಳ ಜಿಲ್ಲೆಯಲ್ಲಿ ತಾಂಡಗಳು ಎದುರಿಸುತ್ತಿರುವ ಸಮಸ್ಯೆಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧ (೧೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ತಾಂಡಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ತಾಂಡಗಳ ಜನರು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಇ) ಈ ತಾಂಡಗಳ ಅಭಿವೃದ್ಧಿಗೆ ಕಳೆದ ೨ ವರ್ಷದಲ್ಲಿ ಎಷ್ಟು ಹಣ ಮಂಜೂರು ಮಾಡಲಾಗಿದೆ ; (ತಾಂಡವಾರು ಮಾಹಿತಿ ನೀಡುವುದು)

(ಈ) ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ ; ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು ? (ತಾಲ್ಲೂಕುವಾರು ವಿವರ ನೀಡುವುದು)



## ಕೊಪ್ಪಳ ಜಿಲ್ಲೆಯಲ್ಲಿರುವ ಗೋಮಾಳ ಪ್ರದೇಶ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨ (೧೯೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿರುವ ಗೋಮಾಳ ಪ್ರದೇಶದ ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು ಗೋಮಾಳ ಪ್ರದೇಶದ ವಿವರ ನೀಡುವುದು)

(ಆ) ಗೋಮಾಳದ ಜಾಗವನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ ; (ವಿವರ ನೀಡುವುದು)

(ಇ) ಗೋಮಾಳ ಜಾಗವನ್ನು ಒತ್ತುವರಿ ಮಾಡಿರುವ ಪ್ರಕರಣಗಳು ಪತ್ತೆಯಾಗಿವೆಯೇ ; ಪತ್ತೆಯಾಗಿದ್ದಲ್ಲಿ ವಿವರ ನೀಡುವುದು ?

## ಅರಣ್ಯ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩ (೨೧೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅರಣ್ಯ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರ ಸಂಖ್ಯೆ ಎಷ್ಟು ;

(ಆ) ಎಷ್ಟು ವರ್ಷಗಳಿಂದ ಈ ರೈತರು ಅರಣ್ಯ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ; ಹಾಗೂ ಈ ಜಮೀನಿನ ವಿಸ್ತೀರ್ಣವೆಷ್ಟು ;

(ಇ) ಸದರಿ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಈ ಜಮೀನನ್ನು ಮಂಜೂರು ಮಾಡಲು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ಈ ಅರಣ್ಯ ಜಮೀನನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ನೀಡಲು ಯಾವುದಾದರೂ ಸಮಿತಿಯನ್ನು ರಚನೆ ಮಾಡಲಾಗಿದೆಯೇ ; ಮಾಡಲಾಗಿದ್ದಲ್ಲಿ ವಿವರ ನೀಡುವುದು ?

## ಅಗ್ನಿ ಆಕಸ್ಮಿಕದಿಂದ ಸುಟ್ಟು ಹೋದ ಬೆಳೆಗಳ ಹಾನಿಯ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೪ (೨೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಿಂದ ಅಗ್ನಿ ಆಕಸ್ಮಿಕದಿಂದ ನಾಶವಾದ ಬೆಳೆ, ಒಕ್ಕಣೆ ಮಾಡಿದ ಬೆಳೆ ಹಾಗೂ ಹುಲ್ಲು ಬಣವೆಗಳ ಪ್ರಕರಣಗಳ ಸಂಖ್ಯೆ ಎಷ್ಟು ; ಇದರಿಂದ ರೈತರಿಗೆ ಆಗಿರುವ ನಷ್ಟ ಎಷ್ಟು ; (ಪ್ರಕರಣವಾರು ವಿವರ ಒದಗಿಸುವುದು)

(ಆ) ಈ ಪ್ರಕರಣಗಳಲ್ಲಿ ಇದುವರೆಗೆ ರೈತಾಪಿ ಜನರಿಗೆ ಸರ್ಕಾರದ ವತಿಯಿಂದ ನೀಡಿರುವ ಪರಿಹಾರ ಎಷ್ಟು ; ಇನ್ನೂ ನೀಡಬೇಕಾಗಿರುವ ಪರಿಹಾರ ಎಷ್ಟು ? (ಪ್ರಕರಣವಾರು ವಿವರಗಳನ್ನು ಒದಗಿಸುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59/ಕಾ.ಸೂ. 0 3478/ 1000 ಪ್ರತಿಗಳು/31–01–15